ದೆಹಲಿ ಕರ್ನಾಟಕ ಸಂಘದ

# ಅಭಿಮತ

ಆಗಸ್ಟ್ 2020
ಬೆಲೆ ರೂ. 1



## 74ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು



ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮವೊಂದರಲ್ಲಿ ಸಂಘದ ಮಾಜಿ ಅಧ್ಯಕ್ಷೆ ಡಾ. ಸರೋಜಿನಿ ಮಹಿಷಿ ಅವರು ಮಾತನಾಡುತ್ತಿರುವುದು (1978–80)



ದೆಹಲಿ ಕರ್ನಾಟಕ ಸಂಘದ ಸುವರ್ಣ ಜಯಂತಿಯ ಅಂಗವಾಗಿ 'ಸಂಗೀತ ಸಂಜೆ' ಕಾರ್ಯಕ್ರಮ ನೀಡಲು ಆಗಮಿಸಿದ ವರನಟ ದಿ. ಡಾ. ರಾಜ್‌ಕುಮಾರ್ ಅವರನ್ನು ಸ್ವಾಗತಿಸಿದ ಸಂದರ್ಭ. ಸಂಘದ ಮಾಜಿ ಉಪಾಧ್ಯಕ್ಷೆ ಶ್ರೀಮತಿ ಸುಮಿತ್ರಾ ರಾವ್ ಮತ್ತು ಡಾ. ರಾಜ್‌ಕುಮಾರ್ ಅವರ ಪತ್ನಿ ದಿ. ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್ ಅವರನ್ನು ಕಾಣಬಹುದು (1998)


**DELHI KARNATAKA SANGHA** Rao Tularam Marg, Sector-12, R K Puram, New Delhi-110022.
Phone: 011-26109615. 011-26104818 email:dksangha@gmail.com

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳಿ ಸದಸ್ಯರು
ಚಂದ್ರಶೇಖರ ಜೋಳದರಾಶಿ
ಎಸ್. ಕುಮಾರ್
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜಿ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

ಮುಖಪುಟ ಚಿತ್ರ ಕೃಪೆ
ಶ್ರೀಕಾಂತ್ ಜಿ. ಪೊದ್ದಾರ್



## ಸಂಪಾದಕೀಯ


# ಸಂಗ್ರಾಮ ವೀರರ ಸಮಾಜಮುಖಿ ಕಾರ್ಯಗಳು


ಆಗಸ್ಟ್ 15 ಮತ್ತೆ ಬಂದಿದೆ. ಇದು ಬ್ರಿಟೀಷರ ದಬ್ಬಾಳಿಕೆಯಿಂದ ಭಾರತ ಸ್ವತಂತ್ರವಾದ ದಿನ. ಈ ದಿನ ಬಹುತೇಕ ಎಲ್ಲರೂ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಮತ್ತು ಬಲಿದಾನದ ಕುರಿತು ಮಾತನಾಡುತ್ತಾರೆ ಮತ್ತು ಸ್ಮರಿಸುತ್ತಾರೆ. ಇದು ಯೋಗ್ಯವಾದದ್ದು ನಿಜ. ಆದರೆ ಇದರೊಂದಿಗೆ ಆ ಮಹನೀಯರು ಹೊಂದಿದ್ದ ಸಾಮಾಜಿಕ ಕಳಕಳಿಯ ಅರಿವೂ ಕೂಡ ನಮಗೆ ಬಹಳ ಮುಖ್ಯ. ಏಕೆಂದರೆ ಇಂದು ದೇಶ ಬಾಹ್ಯಶಕ್ತಿಗಳಿಂದ ಮುಕ್ತಿ ಪಡೆದಿದ್ದರೂ, ಇಲ್ಲಿ ಆಂತರಿಕ ಸಂಘರ್ಷಗಳು ಮುಂದುವರಿದಿದೆ.

ಮುಖ್ಯವಾಗಿ ಜಾತೀಯತೆ, ಧಾರ್ಮಿಕ ಕಲಹ, ಮೌಢ್ಯ ಮತ್ತು ಲಿಂಗಾಧಾರಿತ ಅಸಮಾನತೆ ಮೊದಲಾದ ಸಮಸ್ಯೆಗಳು ದೇಶದ ನಾಗರಿಕರನ್ನು ಕಾಡುತ್ತಲೇ ಇದೆ. ಆದ್ದರಿಂದ ಈ ಆಂತರಿಕ ಸಮಸ್ಯೆಗಳಿಂದ ಮುಕ್ತಿ ಹೊಂದುವುದು ಇಂದಿನ ಅಗತ್ಯ.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಅನೇಕ ಮಹನೀಯರು ದೇಶಭಕ್ತಿಯಿಂದ ಬ್ರಿಟೀಷರ ವಿರುದ್ಧ ಹೋರಾಡುತ್ತಲೇ ದೇಶದ ಸಾಮಾಜಿಕ ಸಮಸ್ಯೆಗಳ ಕುರಿತು ಕಳಕಳಿ ಹೊಂದಿದ್ದರು. ಅಲ್ಲದೆ ಇದಕ್ಕೆ ಸೂಕ್ತ ಪರಿಹಾರ ಕಂಡುಕೊಳ್ಳಲು ನಿರಂತರವಾಗಿ ಶ್ರಮಿಸಿದ್ದರು ಎನ್ನುವುದು ಗಮನಾರ್ಹ. ಈ ದೆಸೆಯಲ್ಲಿ ಕೆಲಸ ಮಾಡಿದ ಕರ್ನಾಟಕದ ಕೆಲವು ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರನ್ನು ನಾವು ನೆನೆಯಬೇಕು.

ನಮ್ಮ ನಾಡಿನಲ್ಲಿ 'ಕರ್ನಾಟಕದ ಗಾಂಧಿ' ಎನಿಸಿಕೊಂಡಿದ್ದ ಹರ್ಡೇಕರ್ ಮಂಜಪ್ಪ ಅವರು ಕ್ರಾಂತಿಯೋಗಿ ಬಸವಣ್ಣನವರ ಬದುಕು ಮತ್ತು ವಿಚಾರಗಳಿಂದ ಪ್ರೇರಣೆ ಪಡೆದಿದ್ದರು. ಉತ್ತರಕನ್ನಡ ಜಿಲ್ಲೆಯ ಬನವಾಸಿಯಲ್ಲಿ ಜನಿಸಿದ್ದ ಮಂಜಪ್ಪನವರು ಅಂದು ಸಮಾಜದಲ್ಲಿ ಇದ್ದ ಜಾತೀಯತೆ ಮತ್ತು ಮೂಢನಂಬಿಕೆಗಳನ್ನು ಹೋಗಲಾಡಿಸಲು ಬಹುವಾಗಿ ಶ್ರಮಿಸಿದ್ದರು. ಸಮಾಜದಲ್ಲಿ ವೈಚಾರಿಕ ಜಾಗೃತಿಯನ್ನು ಮೂಡಿಸಲು ಸುಮಾರು ನಲವತ್ತು ಪುಸ್ತಕಗಳನ್ನು ಬರೆದಿದ್ದ ಮಂಜಪ್ಪನವರು ತಾವು ಬರೆದ ಬಸವಣ್ಣನವರ ಕುರಿತ ಕೃತಿಯನ್ನು ಮಹಾತ್ಮ ಗಾಂಧಿಯವರಿಗೆ ಕಾಣಿಕೆಯಾಗಿ ನೀಡಿದ್ದರು.


ಹರ್ಡೇಕರ್ ಮಂಜಪ್ಪ


ಸದಾಶಿವ ರಾವ್


ಜೋಕಿಮ್ ಆಳ್ವ

ದೇಶಭಕ್ತ ಕಾರ್ನಾಡ್ ಸದಾಶಿವ ರಾವ್ ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುತ್ತಲೇ ಮಹಿಳಾಪರ ಚಟುವಟಿಕೆಯಲ್ಲಿ ಮುಂಚೂಣಿಯಲ್ಲಿದ್ದರು. ಮಹಿಳಾ ಸಭಾವನ್ನು ಅವರು ಸ್ಥಾಪಿಸಿದ್ದರು. ಶ್ರೀಮಂತರಾಗಿದ್ದರೂ ಬಡಜನರ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡಿದ್ದರು. ಇದರಿಂದಾಗಿ ತಮ್ಮ ಜೀವಿತದ ಅಂತಿಮ ದಿನಗಳಲ್ಲಿ ಅಂತ್ಯ ಸಂಸ್ಕಾರಕ್ಕೆ ಹಣಕಾಸಿನ ಕೊರತೆಯನ್ನು ಎದುರಿಸಿದ್ದರು. ಪ್ರತೀ ವರ್ಷ ಸುಮಾರು ಎರಡು ಲಕ್ಷ ಮಹಿಳೆಯರು ಇಂದಿಗೂ ಭಾರತದಲ್ಲಿ ಕೌಟುಂಬಿಕ ದೌರ್ಜನ್ಯಕ್ಕೆ ಬಲಿಯಾಗುತ್ತಿದ್ದಾರೆ. ಈ ಸಂದರ್ಭದಲ್ಲಿ ಸದಾಶಿವ ರಾವ್ ಅಂತಹ ಮಹನೀಯರು ನಮ್ಮ ಜೊತೆ ಇರಬೇಕಾಗಿತ್ತು.

ಭಾರತದಲ್ಲಿ ಇಂದು ಅಲ್ಪ ಸಂಖ್ಯಾತರು ಎದುರಿಸುತ್ತಿರುವ ಸಮಸ್ಯೆಗಳು ಹಲವು. ಇದು ದೇಶದ ಆಂತರಿಕ ಸಂಘರ್ಷದ ಭಾಗವಾಗಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟೀಷರ ವಿರುದ್ಧ ಹೋರಾಡಲು ಅಲ್ಪಸಂಖ್ಯಾತರನ್ನು ಒಂದುಗೂಡಿಸಿದ್ದ ಮಂಗಳೂರಿನ ಜೋಕಿಮ್ ಆಳ್ವ ಅವರ ದಿಟ್ಟತನ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಅಲ್ಪ ಸಂಖ್ಯಾತರ ಅಭಿವೃದ್ಧಿ, ಇತರ ಸಮುದಾಯಗಳೊಂದಿಗೆ ಸಾಮರಸ್ಯಕ್ಕೆ ಹೆಸರಾಗಿದ್ದ ಜೋಕಿಮ್ ಆಳ್ವರ ಸಾಮಾಜಿಕ ಕಳಕಳಿ ಅನುಸರಣೀಯ.

ಭಾರತ 74ನೇ ಸ್ವಾತಂತ್ರ್ಯೋತ್ಸವ ಆಚರಿಸುತ್ತಿರುವ ಹಿನ್ನೆಲೆಯಲ್ಲಿ ದೇಶದ ಆಂತರಿಕ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಗಮನಹರಿಸಬೇಕಾಗಿದೆ. ಇದಕ್ಕಾಗಿ ನಮ್ಮ ಸ್ವಾತಂತ್ರ್ಯ ಸಂಗ್ರಾಮ ವೀರರ ಸಮಾಜಮುಖಿ ಕೆಲಸಗಳ ಅರಿವು ನಮಗೆ ನೆರವಾಗಬಹುದು. ನಿಮಗೆಲ್ಲರಿಗೂ 74ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಹಾರ್ದಿಕ ಶುಭಾಶಯಗಳು.

ಡಾ. ಅವನೀಂದ್ರನಾಥ್ ರಾವ್

**ಮುಖಪುಟ ಚಿತ್ರ**

ದೇಶ ಕಾಯುವ ಯೋಧರಿಗೆ ನಮಿಸುವ ಈ ಬಾರಿಯ ಮುಖಪುಟ ಚಿತ್ರವನ್ನು ನೀಡಿದವರು ದೆಹಲಿಯಲ್ಲಿ ನಮ್ಮ ನಡುವೆ ಇರುವ ಶ್ರೇಷ್ಠ ಚಿತ್ರಕಲಾವಿದರಾದ ಶ್ರೀಕಾಂತ್ ಜಿ. ಪೊದ್ದಾರ್. ಅವರ ಈ ಅಪೂರ್ವ ಕಲಾಕೃತಿಗೆ ಅಭಿನಂದನೆಗಳು ಮತ್ತು ನಮ್ಮ ಹಾರ್ದಿಕ ಧನ್ಯವಾದಗಳು.

–ಸಂ

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ
ಸಂಪುಟ 30 ಸಂಚಿಕೆ 11
ಆಗಸ್ಟ್ 2020, ಬೆಲೆ ರೂ. 1

## ನಮ್ಮನಮ್ಮೊಳಗೆ

# ಮಳೆಗಾಲದ ಅಬ್ಬರದಡಿಯಲ್ಲಿ ಮೊರೆವ ಕೊರೊನಾ

ಕಳೆದ ಒಂದು ತಿಂಗಳಿಂದ ಏನೆಲ್ಲ ಆಗಿ ಹೋಗುತ್ತಿದೆ. ಕೊರೊನಾದ ಹಾವಳಿಯಿಂದ ದೇಶ ಇನ್ನೂ ತತ್ತರಿಸುತ್ತಿದೆ. ದೆಹಲಿಯಲ್ಲಿ ಒಂದು ಬಗೆಯಲ್ಲಿ ಅದು ನಿಯಂತ್ರಣದಲ್ಲಿದ್ದಂತೆ ತೋರಿದರೂ ದೇಶದ ಇತರ ಭಾಗಗಳಲ್ಲಿ, ಅದರಲ್ಲೂ ಕರ್ನಾಟಕದಲ್ಲಿ, ಅದರ ವಿಸ್ತರಣೆ ಇನ್ನೂ ಯಾವುದೇ ಬಗೆಯ ತಹಬಂದಿಗೆ ಬಂದಂತೆ ತೋರುತ್ತಿಲ್ಲ. ಮುಂಬೈ–ಮಹಾರಾಷ್ಟ್ರದಲ್ಲಿ ಮತ್ತು ದಕ್ಷಿಣದ ರಾಜ್ಯಗಳಲ್ಲಿ (ಈಗ ಪ್ರಮುಖವಾಗಿ ಆಂಧ್ರ ಪ್ರದೇಶದಲ್ಲಿ) ಕೊರೊನಾದಿಂದ ಪೀಡಿತರಾದವರ ಸಂಖ್ಯೆ ಹೆಚ್ಚುತ್ತಿದೆ. ಇದನ್ನು ಬರೆಯುತ್ತಿರುವಾಗ ಒಂದು ದಿನದ ಕೊರೊನಾ ಪೀಡಿತರ ಸಂಖ್ಯೆ 65000 ಸಾವಿರವನ್ನು ದಾಟುತ್ತಿದ್ದರೆ, ಒಟ್ಟಾರೆ ದೇಶದಾದ್ಯಂತ ಅದರ ಮುಷ್ಟಿಯಲ್ಲಿ ಸಿಕ್ಕವರ ಸಂಖ್ಯೆ ಇಪ್ಪತ್ತು ಲಕ್ಷವನ್ನು ದಾಟಿದೆ.

ಇನ್ನೂ ದೆಹಲಿಯಲ್ಲಿನ ಜನಜೀವನ ಎಲ್ಲ ರೀತಿಯಲ್ಲೂ ಸಾಮಾನ್ಯ ಸ್ಥಿತಿಗೆ ಮರಳುವ ಸಾಧ್ಯತೆಗಳು ಕಾಣುತ್ತಿಲ್ಲ. ಸರಕಾರಿ ಕಛೇರಿಗಳು, ಅಂಗಡಿ ಮುಗ್ಗಟ್ಟುಗಳು ಹಾಗೂ ಇನ್ನಿತರ ಖಾಸಗಿ ಕಾರ್ಯಚಟುವಟಿಕೆಗಳು ನಿಧಾನವಾಗಿ ತೆರೆದುಕೊಳ್ಳುತ್ತಿರುವ ಲಕ್ಷಣಗಳು ಕಾಣುತ್ತಿದ್ದರೂ ದೆಹಲಿಯ ಮೆಟ್ರೊ ಇನ್ನೂ ಪ್ರಾರಂಭವಾಗಿಲ್ಲ. ಬಸ್ಸು ಮತ್ತು ಇತರ ವಾಹನ ಸೌಕರ್ಯಗಳು ನಿಧಾನವಾಗಿ ತೆರೆದುಕೊಳ್ಳುತ್ತಿವೆ. ದೆಹಲಿಯ ಸರಕಾರ ವಾರಾಂತ್ಯದ ಮಾರುಕಟ್ಟೆಗಳನ್ನು, ಮಾಲ್ ಮತ್ತು ಸಿನಿಮಾ ಮಂದಿರಗಳನ್ನು ತೆರೆಯುವತ್ತ ಮುಂದಾಗಿದ್ದರೆ, ಕೇಂದ್ರ ಸರಕಾರ ಇದಕ್ಕೆ ತನ್ನ ಸಮ್ಮತಿಯನ್ನು ಸದ್ಯದಲ್ಲಿ ನೀಡಿಲ್ಲ. ದೆಹಲಿಯಲ್ಲಿನ ಕೇಜ್ರಿವಾಲ್ ಸರಕಾರ ಚುನಾಯಿತ ಸರಕಾರವಾದರೂ ಅದು ಕೇಂದ್ರ ಸರಕಾರದ ಒಪ್ಪಿಗೆಯಿಲ್ಲದೆ ಕೆಲವೊಂದು ವಿಷಯಗಳ ಕುರಿತಾಗಿ ತನ್ನದೇ ಆದ ನಿಶ್ಚಯಗಳನ್ನು ತೆಗೆದುಕೊಳ್ಳುವ ಸ್ವಾತಂತ್ರವನ್ನು ಹೊಂದಿಲ್ಲ. ಇದೊಂದು ಈ ದೆಹಲಿ ಸರಕಾರಕ್ಕಿರುವ ಕಾನೂನಿನ ಇಕ್ಕಟ್ಟು. ಹೀಗಾಗಿ ದೆಹಲಿ ಕೊರೊನಾ ಕುರಿತಾಗಿ ಎಚ್ಚರದಿಂದ ಮುಂದುವರಿಯುವಂತಾಗಿದೆ.

ಈಗ ದೇಶದ ತುಂಬಾ ಮಳೆಗಾಲದ ಅಬ್ಬರ. ಅಸ್ಸಾಂ ಮತ್ತು ಬಿಹಾರಗಳಲ್ಲಿ ಈ ಅತಿವೃಷ್ಟಿಯಿಂದ ಉಂಟಾದ ಪ್ರವಾಹದ ಕಾರಣದಿಂದಾಗಿ ಮನೆಮಠ ಕಳೆದುಕೊಂಡವರ ಸಂಖ್ಯೆ ಲಕ್ಷ ದಾಟಿದೆ. ನೂರಾರು ಜನ ದೇಶದ ಉದ್ದಗಲಕ್ಕೂ ಈಗಾಗಲೇ ನೆರೆಹಾವಳಿಗೆ ತುತ್ತಾಗಿ ಜೀವ ಕಳೆದುಕೊಂಡಿದ್ದಾರೆ. ಅತ್ತ ಕರ್ನಾಟಕದಲ್ಲಿ ಈ ಮಳೆರಾಯನ ಅಬ್ಬರದಿಂದಾಗಿ, ಅದರಲ್ಲೂ ಕರಾವಳಿ ಮತ್ತು ಮಲೆನಾಡಿನ ಜಿಲ್ಲೆಗಳಲ್ಲಿ, ಜನಜೀವನ ಅಸ್ತವ್ಯಸ್ತವಾಗಿ ಹೋಗಿದೆ. ಕೊಡಗಿನಲ್ಲಿಯೂ ಸಹ ಮಳೆಯ ಪ್ರಕೋಪದಿಂದಾಗಿ ಸಾಕಷ್ಟು ಹಾನಿಯಾಗಿದೆ. ಕರ್ನಾಟಕದ ವಿವಿಧ ಭಾಗಗಳಲ್ಲಿರುವ ಜಲಾಶಯಗಳಲ್ಲಿ ನೀರು ತ್ವರಿತ ಪ್ರಮಾಣದಲ್ಲಿ ತುಂಬುತ್ತಿರುವುದು ಸಂತಸದ ಸಂಗತಿ. ಆದರೆ, ತುಂಬಿದ ಜಲಾಶಗಳ ಬಾಗಿಲುಗಳನ್ನು ತೆರೆದಾಗ ಆಗಬಹುದಾದ ಅನಾಹುತಗಳ ಬಗ್ಗೂ ನಾವು ಚಿಂತಿಸಬೇಕಾಗಿದೆ. ಹುಬ್ಬಳ್ಳಿ–ಧಾರವಾಡಗಳಲ್ಲೂ ಕೂಡಾ ಮಲೆನಾಡಿನೋಪಾದಿಯಲ್ಲಿ ಮಳೆ ಸುರಿದಿದ್ದು ಒಂದು ಬಗೆಯ ದಾಖಲೆಯೆನ್ನಲಾಗುತ್ತಿದೆ. ಈಗಾಗಲೇ ಕೊರೊನಾದ ಲಾಕ್‌ಡೌನ್‌ನಿಂದಾಗಿ ಹಣಕಾಸಿನ ಮುಗ್ಗಟ್ಟಿನಲ್ಲಿರುವ ಕರ್ನಾಟಕ ಸರಕಾರಕ್ಕೆ ಕೇಂದ್ರದ ನೆರವು ಎಂದಿಗಿಂತಲೂ ಈಗ ಅತ್ಯಗತ್ಯವಾಗಿದೆ. ಈ ಮಳೆರಾಯ ಪ್ರತಿವರ್ಷದಂತೆ ಈ ಬಾರಿಯೂ ಮುಂಬೈಗೆ ಲಗ್ಗೆ ಇಟ್ಟ ಬಗೆಯನ್ನು ನಾವು ದಿನನಿತ್ಯ ಮಾಧ್ಯಮಗಳ ಮೂಲಕ ನೋಡುತ್ತಿದ್ದೇವೆ. ಕೊರೊನಾದ ಹರಡುವಿಕೆಯನ್ನು ಹತೋಟಿಗೆ ತರಲು ಹೋರಾಡುತ್ತಿರುವ ಮುಂಬೈ ಮತ್ತು ಮಹಾರಾಷ್ಟ್ರದ ಜನಸಮುದಾಯದಕ್ಕೆ ಈ ಎಲ್ಲ ಸಂಕಷ್ಟಗಳಲ್ಲಿ ನಮ್ಮಿಂದಾಗುವ ಎಲ್ಲ ಬೆಂಬಲವನ್ನೂ ನಾವು ನೀಡಬೇಕಾದ ಅಗತ್ಯವಿದೆ. ಲಕ್ಷಾಂತರ ಕನ್ನಡಿಗರು ಮುಂಬೈ ಮತ್ತು ಮಹಾರಾಷ್ಟ್ರದ ಭಾಗವಾಗಿದ್ದಾರೆಂಬುದನ್ನು ನಾವು ಮರೆಯಬಾರದು. ಈ ಮಳೆಯ ಆವಾಂತರ ದಕ್ಷಿಣದಲ್ಲಿ ಜನಜೀವನವನ್ನು ಅಸ್ತವ್ಯಸ್ತಗೊಳಿಸಿದ್ದರೂ ದೆಹಲಿಯಲ್ಲಿ, ಅದರಲ್ಲೂ ಉತ್ತರ ಭಾರತದಲ್ಲಿ ಅದು ಇನ್ನೂ ತನ್ನ ಛಾಪನ್ನು ಮೂಡಿಸಿದಂತೆ ಕಾಣುವುದಿಲ್ಲ. ಕಳೆದ ಸುಮಾರು ಒಂದು ತಿಂಗಳಿಂದ ಹತ್ತಾರು ಬಾರಿ ದೆಹಲಿಯಲ್ಲಿ ಮಳೆಯ ಸಿಂಚನವಾದರೂ ನಮ್ಮನ್ನೆಲ್ಲ ಗಾಬರಿಗೊಳಿಸುವಷ್ಟು, ನೆಲದಿಂದ ತಂಪು ಎದ್ದು ಹೊರಡುವ ರೀತಿಯಲ್ಲಿ ಇನ್ನೂ ಮಳೆಯ ಆಗಮನವಾಗಿಲ್ಲ. ಮಲೆನಾಡಿನ ಕಡೆಯ ಮಾತುಗಳಲ್ಲಿ ಹೇಳುವುದಾದರೆ, ದೆಹಲಿಯಲ್ಲಿ "ಹಿಡಿದುಕೊಂಡು" ಮಳೆ ಇನ್ನುವರೆಗೂ ಹೊಯ್ಯಲಿಲ್ಲ. ಬಹುಶಃ ಮುಂಬರುವ ದಿನಗಳಲ್ಲಿ ಮಳೆರಾಯ ದೆಹಲಿಗೆ ಎಲ್ಲರಿಗೂ ಸುಖ ಕೊಡುವಂತೆ ಬಂದು ನಿಲ್ಲುವಂತಾಗಲಿ ಎಂದು ನಾವೆಲ್ಲ ಹಾರೈಸೋಣ.

ಈಗಾಗಲೇ ನಾವೆಲ್ಲ ಕೊರೊನಾದ ವಿರುದ್ಧ ಸಮರ ಸಾರುತ್ತ 'ಲಾಕ್ ಡೌನ್, ಅನ್ ಲಾಕ್ ಡೌನ್' ಎಂದುಕೊಳ್ಳುತ್ತ ನಾಲ್ಕು ತಿಂಗಳು ಕಳೆದಿದ್ದಾಗಿದೆ. ದೆಹಲಿಯ ಮತ್ತು ಅದರ ಸುತ್ತಮುತ್ತಲಿನ ಎನ್.ಸಿ.ಆರ್ ನಲ್ಲಿರುವ ಹಲವಾರು ವಿಶ್ವವಿದ್ಯಾಲಯಗಳು, ಶಿಕ್ಷಣ ಸಂಸ್ಥಾನಗಳು ಕೇಂದ್ರ ಸರಕಾರದ ಗೃಹ ಮಂತ್ರಾಲಯದ ಆದೇಶಗಳಿಗೆ ಅನುಸಾರವಾಗಿ ಇನ್ನೂ ತಮ್ಮ ಶೈಕ್ಷಣಿಕ ವರ್ಷದ ಬಾಗಿಲುಗಳನ್ನು ತೆರೆದಿಲ್ಲ. ಶಾಲಾ ಮಕ್ಕಳ ಪಾಠಪ್ರವಚನಗಳು ನಾವೆಲ್ಲ ಎಂದೂ ಕಾಣದ ಕೇಳದ 'ಆನ್‌ಲೈನ್'ಯೋಪಾಧಿಯಲ್ಲಿ ನಡೆಯುತ್ತಿವೆ. ದೆಹಲಿಯ ಲೋಧಿ ಎಸ್ಟೇಟಿನಲ್ಲಿರುವ ಕನ್ನಡ ಶಾಲೆಯಲ್ಲಿಯೂ ಸಹ ತರಗತಿಗಳು ಇದೇ ರೀತಿಯಲ್ಲಿ ಪ್ರಾರಂಭವಾಗಿವೆ. ಈ ಬಗೆಯ ಜಾಲತಾಣದ ವಿದ್ಯಾಭ್ಯಾಸಕ್ಕೆ ಅದರದ್ದೇ ಆದ ಹಲವಾರು ತೊಂದರೆಗಳು ಇವೆ. ಎಲ್ಲ ಸ್ತರದ ಮಕ್ಕಳು ಈ ಬಗೆಯ ಜಾಲತಾಣದ ತರಗತಿಗಳಿಗೆ ಸೇರಿಕೊಳ್ಳಲು ಬೇರೆಬೇರೆ ಕಾರಣಗಳಿಂದಾಗಿ ಅಸಮರ್ಥರಾಗಿದ್ದರೆ ಅವರಿಗೆ ಬೇಕಾದ ಮಾನಸಿಕ ಬೆಂಬಲವನ್ನು ನೀಡುವಂತಹ ಕೆಲಸವಾಗಬೇಕು. ಮಕ್ಕಳ ಮನಸ್ಸು ತುಂಬಾ ಸೂಕ್ಷ್ಮವಾಗಿರುತ್ತದೆ. ಒಂದು ಬಗೆಯ ಅಸಮಾನತೆಯ ಹರವು ಅವರನ್ನು ಕಾಡತೊಡಗಿದಾಗ ಅದರಿಂದ ಉಂಟಾಗಬಹುದಾದ ಪರಿಣಾಮಗಳನ್ನು ಊಹಿಸುವುದು ಅಸಾಧ್ಯ. ದೇಶದ ಉದ್ದಗಲಕ್ಕೂ ಈ ಕುರಿತಾದ ಮಕ್ಕಳ ಬದುಕಿನ ಅಂತ್ಯದ ಧಾರುಣವಾದ ಘಟನೆಗಳನ್ನು ನಾವು ದಿನನಿತ್ಯ ಜಾಲತಾಣಗಳಲ್ಲಿ ಮೂಡಿ ಬರುವುದನ್ನು ಕಾಣುತ್ತಿದ್ದೇವೆ.

ದೆಹಲಿ ಕರ್ನಾಟಕ ಸಂಘವು ಸಹ ಇವೆಲ್ಲವನ್ನೂ ಗಮನದಲ್ಲಿರಿಸಿಕೊಂಡು ತನ್ನ ಮೊದಲ ಜಾಲತಾಣದ ಕಾರ್ಯಕ್ರಮವನ್ನು ಮಕ್ಕಳಿಗಾಗಿಯೇ ಸ್ವಾತಂತ್ರ್ಯ ದಿನದಂದು ಆಯೋಜಿಸಿದೆ. ಇನ್ನು ಮುಂಬರುವ ದಿನಗಳಲ್ಲಿ ಸಂಘವು ತನ್ನ ಎಲ್ಲ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳನ್ನು ದೆಹಲಿಯ ಕನ್ನಡಿಗರಿಗೆ ಜಾಲತಾಣದ ಮೂಲಕವೇ ಆಯೊಜಿಸುವ ಬಗ್ಗೆ ಕಾರ್ಯಕಾರಿ ಸಮಿತಿಯಲ್ಲಿ ನಿರ್ಧಾರ ತೆಗೆದುಕೊಂಡಿದೆ. ಬಹುಶಃ ಮುಂದಿನ ಕೆಲ ತಿಂಗಳುಗಳ ಕಾಲ ಸಂಘದ ಆವರಣದಲ್ಲಿ ಯಾವುದೇ ಜನಸಂದಣಿಯ ಕಾರ್ಯಕ್ರಮಗಳನ್ನು ಆಯೊಜಿಸುವ ಸಾಧ್ಯತೆಗಳು ಕಾಣುತ್ತಿಲ್ಲ. ಕರ್ನಾಟಕ ಮತ್ತು ದೇಶದ ಇತರ ಭಾಗಗಳಲ್ಲಿರುವ ಕಲೆ ಮತ್ತು ಸಾಹಿತ್ಯ ಸಂಘಟನೆಗಳು ಕೊರೊನಾದ ಸಂಕಷ್ಟದಿಂದಾಗಿ ಸಾಕಷ್ಟು ಬವಣೆಯನ್ನು ಅನುಭವಿಸುತ್ತಿದ್ದಾರೆ. ಅದರಲ್ಲೂ ತಮ್ಮ ಕಲೆಯನ್ನೇ ಬದುಕಿನ ನೆಲೆಗಟ್ಟಾಗಿ ಇಟ್ಟುಕೊಂಡ ಕಲಾವಿದರಿಗೆ ಈ ಕಾಲದಲ್ಲಿ ಉಸಿರುಗಟ್ಟದೆ ಬದುಕುವುದೇ ಒಂದು ದೊಡ್ಡ ಸವಾಲಾಗಿದೆ. ಇಂತಹ ದುರ್ದರ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದಂತಹ ಸಂಘಟನೆಗಳು ಯಾವ ರೀತಿಯಲ್ಲಿ ಅವರ ಬದುಕನ್ನು ಮರಳಿ ಕಟ್ಟುವ ಕೆಲಸವನ್ನು ಮಾಡಬಹುದು ಎಂಬುದರ ಬಗ್ಗೆ ಚಿಂತನೆಯ ಮತ್ತು ಹೊಸ ಯೋಜನೆಗಳ ಅಗತ್ಯವಿದೆ. ಈ ಕುರಿತಾಗಿ ತಮ್ಮೆಲ್ಲರ ಸಲಹೆಗಳನ್ನು ನೀರಿಕ್ಷಿಸುತ್ತ, ಕೊರೊನಾದ ಅಟ್ಟಹಾಸಕ್ಕೆ ನಾವೆಲ್ಲ ಸಡ್ಡು ಹೊಡೆದು ಸಾಂಸ್ಕೃತಿಕವಾಗಿ ನಿಲ್ಲೋಣ ಎಂದು ಆಶಿಸುತ್ತ....

*ಡಾ. ವೆಂಕಟಾಚಲ ಹೆಗಡೆ*
*ಅಧ್ಯಕ್ಷರು*

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ,

ತಮಗೆ ಸ್ವಾತಂತ್ರ್ಯ ದಿನಾಚರಣೆ ಮತ್ತು ಗೌರಿ ಗಣೇಶೋತ್ಸವ ಹಬ್ಬದ ಶುಭಾಶಯಗಳು. ಪ್ರತಿ ಭಾನುವಾರ ದೆಹಲಿ ಕರ್ನಾಟಕ ಸಂಘ ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಾ ಬರುತ್ತಿತ್ತು. ಆದರೆ ಮಾರಕ ರೋಗ ಕೊರೊನ ಕಾರಣ ಯಾವುದೇ ಕಾರ್ಯಕ್ರಮಗಳು ಮಾಡಲು ಸಾಧ್ಯವಾಗುತ್ತಿಲ್ಲ.

ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ ಯಾವ ಕಾರ್ಯಕ್ರಮ, ಸಭೆಗಳನ್ನು ಮಾಡುವಂತಿಲ್ಲ. ಆದರೆ ಈ ಬಾರಿ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಪ್ರತಿ ವರ್ಷದಂತೆ ಈ ವರ್ಷವೂ ಸಹ ಸ್ವಾತಂತ್ರ್ಯ ದಿನಾಚರಣೆಯನ್ನು ಮಿತಿಯಾಗಿ ಕೆಲವೇ ಸದಸ್ಯರನ್ನೊಳಗೊಂಡು ಮಾಡಲಾಗುತ್ತಿದೆ. ಗಣೇಶೋತ್ಸವ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರತಿವರ್ಷವೂ ಮಾಡುತ್ತಿದ್ದೆವು. ಆದರೆ ಈ ಬಾರಿ ಯಾವ ಕಾರ್ಯಕ್ರಮಗಳನ್ನು ಸಹ ಮಾಡಲು ಸರ್ಕಾರದಿಂದ ಅನುಮತಿಗಳು ಸಿಗುತ್ತಿಲ್ಲ. ಆದರೆ ಸಂಪ್ರದಾಯಂತೆ ಗಣೇಶನನ್ನು ಪೂಜೆ ಮಾಡುತ್ತಿದ್ದೇವೆ.

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಮಕ್ಕಳು ಭಾಗವಹಿಸುವ ಕನ್ನಡ ಕವಿಗಳನ್ನು ಪರಿಚಯಿಸುವ ಕಾವ್ಯ ಸಾಹಿತ್ಯ ಕಾರ್ಯಕ್ರಮವನ್ನು ಆನ್‌ಲೈನ್ ಮುಖಾಂತರ ಹಮ್ಮಿಕೊಂಡಿದ್ದೇವೆ. ಈ ಕಾರ್ಯಕ್ರಮದಲ್ಲಿ ಇಪ್ಪತ್ತಕ್ಕಿಂತಲೂ ಹೆಚ್ಚು ಮಕ್ಕಳು ಭಾಗವಹಿಸುತ್ತಿದ್ದಾರೆ.

ಬರುವ ದಿನಗಳಲ್ಲಿ ಇನ್ನೂ ಒಳ್ಳೆಯ ಆನ್‌ಲೈನ್ ಕಾರ್ಯಕ್ರಮಗಳನ್ನು ನಡೆಸೋಣ. ಅದಷ್ಟು ಬೇಗನೆ ಈ ಕೊರೊನಾದಿಂದ ಮುಕ್ತಿ ಪಡೆದ ನಂತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳೋಣ.

ಕರ್ನಾಟಕ ಸರಕಾರ ಎಸ್.ಎಸ್.ಎಲ್.ಸಿ. ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಿದೆ. ಉತ್ತಮ ಫಲಿತಾಂಶ ಬಂದಿದೆ. ಈ ಬಾರಿ ಚಿಕ್ಕಬಳ್ಳಾಪುರ ಜಿಲ್ಲೆ ವಿದ್ಯಾರ್ಥಿಗಳು ಅತಿ ಹೆಚ್ಚು ಅಂಕಗಳನ್ನು ಪಡೆದ ಸಾಧನೆ ಮಾಡಿದ್ದಾರೆ. ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಮತ್ತು ಅವರನ್ನು ಪ್ರೋತ್ಸಾಹಿಸಿದ ಶಿಕ್ಷಕರು ಹಾಗೂ ಪೋಷಕರಿಗೆ ಅಭಿನಂದನೆಗಳು.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*




**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ದೂರವಾಣಿ : 011–26109615 / 26104818**


## ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ

# ಕನ್ನಡ ಕವಿಗಳ ಕವನ ವಾಚನ

**CISCO WEBEX online app ಮೂಲಕ**

**ಅಗಸ್ಟ್ 15ರ ಶನಿವಾರ । ಮಧ್ಯಾಹ್ನ : 3.00 ಗಂಟೆಗೆ**

ಮಾನ್ಯ ದೆಹಲಿ ಕರ್ನಾಟಕ ಸಂಘದ ಸದಸ್ಯರೇ,

ದೆಹಲಿ ಕರ್ನಾಟಕ ಸಂಘವು ನಿಮಗೆಲ್ಲ ತಿಳಿದಿರುವಂತೆ ಪ್ರತಿ ವರ್ಷವೂ ಹತ್ತು ಹಲವು ಕಾರ್ಯಕ್ರಮಗಳನ್ನು ತಪ್ಪದೇ ನಡೆಸಿಕೊಂಡು ಬರುತ್ತಿದೆ. ಆದರೆ ಕೊರೊನಾ ಕಾರಣ ಲಾಕ್ ಡೌನ್ ಇದ್ದುದರಿಂದ ಎಂದಿನಂತೆ ನಮ್ಮ ಕಾರ್ಯಕ್ರಮಗಳನ್ನು ನಡೆಸುವ ಮಾರ್ಗೋಪಾಯಗಳನ್ನು ಕುರಿತು ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸಿ ತೆಗೆದುಕೊಂಡ ನಿರ್ಧಾರದಂತೆ ಆನ್ಲೈನ್ ಮೂಲಕ ಆ್ಯಪ್ (App) ನೆರವಿನಿಂದ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಉದ್ದೇಶಿಸಿದ್ದು ಮೊದಲಿಗೆ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ದಿನಾಂಕ **15–8–2020** ರಂದು, **ಮಧ್ಯಾಹ್ನ 3.00** ಗಂಟೆಗೆ "**ಕನ್ನಡ ಕವಿಗಳ ಕವನ ವಾಚನ**" ಆಯೋಜಿಸಲಾಗಿದೆ.

ಭಾಗವಹಿಸಲು ಇಚ್ಛೆಯುಳ್ಳ ಸದಸ್ಯರ ಮಕ್ಕಳು ದೆಹಲಿ ಕರ್ನಾಟಕ ಸಂಘದ ಜಂಟಿ ಕಾರ್ಯದರ್ಶಿಯಾದ ಶ್ರೀಮತಿ ಪೂಜಾ ರಾವ್ ರವರ **9810882498** Whatsapp numberಗೆ ತಮ್ಮ ಹೆಸರು ಮತ್ತು ವಿಳಾಸಗಳನ್ನು ದಿನಾಂಕ 11.08.2020 (ಮಂಗಳವಾರ) ಸಂಜೆ 6 ಗಂಟೆಯೊಳಗೆ ನೀಡಲು ಕೋರುತ್ತೇವೆ.

**ವಿಶೇಷ ಸೂಚನೆ**

1. ಆರು ವರ್ಷದಿಂದ–ಹದಿನೆಂಟು ವರ್ಷ ವಯಸ್ಸಿನ ಒಳಗಿರುವ ಮಕ್ಕಳು ಭಾಗವಹಿಸಬಹುದು. ಪ್ರತಿಯೊಬ್ಬ ರಿಗೂ **2 ನಿಮಿಷ** ಕಾಲಾವಕಾಶ ಮಾತ್ರ ಇರುತ್ತದೆ. ಅಷ್ಟರೊಳಗೆ ಕವಿಗಳ ಪದ್ಯ ಪೂರ್ಣಗೊಳಿಸಬೇಕು.
2. ನಿಮಗೆ ಇಷ್ಟವಾದ ಕನ್ನಡ ಕವಿಗಳ ಪದ್ಯವನ್ನು ಆಯ್ಕೆ ಮಾಡಿಕೊಂಡು ಆಯೋಜಕರಿಗೆ ಮುಂಚಿತವಾಗಿ ಸೂಚಿಸಲು ವಿನಂತಿ.
3. CISCO WEBEX appನ್ನು ಡೌನ್ಲೋಡ್ ಮಾಡಿಕೊಂಡು ಕಾರ್ಯಕ್ರಮದಲ್ಲಿ ಭಾಗವಹಿಸುವುದು.
4. ಮೊದಲು ನೋಂದಾಯಿಸಿಕೊಂಡವರಿಗೆ ಮೊದಲ ಹಂತದಲ್ಲಿ ಅವಕಾಶ.

**"ಬನ್ನಿ ಬಂಧುಗಳೇ,
ಕನ್ನಡ ಕವನ ವಾಚನ ಮಾಡೋಣ ಕೊರೊನವನ್ನು ಓಡಿಸಲು ಮನೆಮನೆಯಿಂದಲೇ ಕನ್ನಡದ ಕಹಳೆ ಊದೋಣ, ಮನಮನದಲ್ಲಿ ಕಟ್ಟೋಣ, ಬೆಳೆಸೋಣ"**

**ಸರ್ವರಿಗೂ ಆದರದ ಸ್ವಾಗತ**


**ಡಾ. ವೆಂಕಟಾಚಲ ಹೆಗಡೆ**
**ಅಧ್ಯಕ್ಷರು**

**ಸಿ.ಎಂ. ನಾಗರಾಜ**
**ಪ್ರಧಾನ ಕಾರ್ಯದರ್ಶಿ**

# ಅಭಿನಂದನೆ

## ರಾಜ್ಯಸಭೆ ಜಂಟಿ ಕಾರ್ಯದರ್ಶಿಯಾಗಿ ಡಾ. ಕೆ.ಎಸ್. ಸೋಮಶೇಖರ್

ರಾಜ್ಯಸಭೆಯ ಜಂಟಿ ಕಾರ್ಯದರ್ಶಿಯಾಗಿ ಕನ್ನಡಿಗ ಡಾ. ಕೆ.ಎಸ್. ಸೋಮಶೇಖರ್ ಅವರನ್ನು ನೇಮಕ ಮಾಡಲಾಗಿದೆ. ಕೋಲಾರ ಜಿಲ್ಲೆ ಶ್ರೀನಿವಾಸಪುರದವರಾದ ಇವರು, ಈ ಹುದ್ದೆಗೆ ಏರಿದ ಮೊದಲ ಕನ್ನಡಿಗ ಅಧಿಕಾರಿ. ಈ ಮೊದಲು ರಾಜ್ಯಸಭೆಯ ನಿರ್ದೇಶಕರಾಗಿದ್ದರು. ಕೇಂದ್ರದ ರೈಲ್ವೆ ಹಾಗೂ ಜವಳಿ ಸಚಿವರ ಆಪ್ತ ಕಾರ್ಯದರ್ಶಿಯಾಗಿದ್ದರು. ರಾಜ್ಯ ಸೇವೆಗೆ ನಿಯೋಜನೆ ಮೇಲೆ ಬಂದಿದ್ದರು.



ಪ್ರಸ್ತುತ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಸ್.ಆರ್. ವಿಶ್ವನಾಥ್ ಅವರ ಆಪ್ತ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಡಾ. ಕೆ.ಎಸ್. ಸೋಮಶೇಖರ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.

## ಯು.ಪಿ.ಎಸ್.ಸಿ ಪರೀಕ್ಷೆಯಲ್ಲಿ ಹೆಮ್ಮೆಯ ಸಾಧನೆ ಮಾಡಿದ ಚೈತ್ರಾ ಎ.ಎಮ್

ಕನ್ನಡತಿ ಕುಮಾರಿ ಚೈತ್ರಾ ಎ.ಎಮ್ ಈ ಬಾರಿಯ ಯು.ಪಿ.ಎಸ್.ಸಿ. (ಕೇಂದ್ರ ಲೋಕಸೇವಾ ಆಯೋಗ) ಪರೀಕ್ಷೆಯಲ್ಲಿ ಉನ್ನತ ಸಾಧನೆ ಮಾಡಿದ್ದಾರೆ. ಮೂಲತಃ ಚಿತ್ರದುರ್ಗದವರಾದ ಚೈತ್ರಾ ಎ.ಎಮ್. ಅವರು ದೆಹಲಿಯ ರಕ್ಷಣಾ ಇಲಾಖೆಯಲ್ಲಿ ವಿಭಾಗ ಅಧಿಕಾರಿಯಾಗಿ ಸುಮಾರು ಎರಡು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಶ್ರೀ ಮಲ್ಲಿಕಾರ್ಜುನ ಮತ್ತು ಶ್ರೀಮತಿ ಎಸ್. ಗಿರಿಜಾ ಅವರ ಏಕಮಾತ್ರ ಪುತ್ರಿ. 2017ರ ಸಾಲಿನ ಪರೀಕ್ಷೆಯಲ್ಲೂ ತೇರ್ಗಡೆಯಾಗಿದ್ದ ಚೈತ್ರಾ ಅವರು ಛಲಬಿಡದ ತ್ರಿವಿಕ್ರಮನಂತೆ ಈ ಸಾಲಿನ ಯು.ಪಿ.ಎಸ್.ಸಿ. ಪರೀಕ್ಷೆಯಲ್ಲಿ 713ನೇ ಅಭ್ಯರ್ಥಿಯಾಗಿ ತೇರ್ಗಡೆಗೊಂಡು ಅನೇಕ ಕನ್ನಡದ ಯು.ಪಿ.ಎಸ್.ಸಿ ಆಕಾಂಕ್ಷಿಗಳಿಗೆ ಸ್ಫೂರ್ತಿಯಾಗಿದ್ದಾರೆ.



ಹೆತ್ತವರೊಂದಿಗೆ ಚೈತ್ರಾ ಎ.ಎಂ.



ಚೈತ್ರಾ ಅವರು ಬೆಂಗಳೂರಿನ ಬಿ.ಎಮ್.ಎಸ್. ಕಾಲೇಜಿನಿಂದ ಇಂಜಿನಿಯರಿಂಗ್ ಪದವಿ ಪಡೆದಿದ್ದರು. ಮೂರು ಬಾರಿ ಯು.ಪಿ.ಎಸ್.ಸಿ ಸಂದರ್ಶನಕ್ಕೆ ಆಯ್ಕೆಯಾಗಿ ತಮ್ಮ ಗುರಿ ತಲುಪಿರುವ ಚೈತ್ರಾ ಅವರಿಗೆ ಅವರು ಮಹತ್ವಕಾಂಕ್ಷೆಯ ಹುದ್ದೆಯನ್ನು ಏರಿ ಕನ್ನಡದ ಹಿರಿಮೆಯನ್ನು ಎತ್ತಿ ಹಿಡಿಯಲಿ ಎಂದು ಹಾರೈಸೋಣ. ಇವರ ಸಾಧನೆ ಇನ್ನಷ್ಟು ಯು.ಪಿ.ಎಸ್.ಸಿ. ಅಭ್ಯರ್ಥಿ ಆಕಾಂಕ್ಷಿಗಳಿಗೆ ಸ್ಫೂರ್ತಿಯಾಗಲಿ ಎಂಬುದು ನಮ್ಮ ಆಶಯ.

ಚೈತ್ರಾ ಎ.ಎಮ್. ಅವರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು.

***ಹರಿಪ್ರಿಯ***

## ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಅಕ್ಷಯ್ ಪೊದ್ದಾರ್ ಅವರ ಚಿತ್ರ ಆಯ್ಕೆ

ದೆಹಲಿ ಕನ್ನಡಿಗ, ಪ್ರತಿಭಾವಂತ ಯುವ ಚಿತ್ರನಿರ್ದೇಶಕ ಅಕ್ಷಯ್ ಎಸ್. ಪೊದ್ದಾರ್ ಅವರ ಕಿರುಚಿತ್ರ ‘ಅರುಣ’ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಪ್ರದರ್ಶನಕ್ಕೆ ಆಯ್ಕೆಯಾಗಿದೆ. ಯುನೈಟೆಡ್ ಕಿಂಗ್‌ಡಮ್‌ನ ಐವರ್‌ನಲ್ಲಿ ದಿನಾಂಕ 16.08.2020ರಂದು ನಡೆಯುವ ದಿ ಲಿಫ್ಟ್ ಆಫ್ ಗ್ಲೋಬಲ್ ನೆಟ್‌ವರ್ಕ್ ಫಿಲ್ಮ್ ಫೆಸ್ಟಿವಲ್‌ನಲ್ಲಿ ಅವರ ಚಿತ್ರ ಪ್ರದರ್ಶನಗೊಳ್ಳಲಿದೆ.






**ಅಕ್ಷಯ್ ಎಸ್. ಪೊದ್ದಾರ್**

ಅಕ್ಷಯ್ ಎಸ್. ಪೊದ್ದಾರ್ ಚಿತ್ರಕಲಾವಿದರಾದ ಶ್ರೀಕಾಂತ್ ಜಿ. ಪೊದ್ದಾರ್ ಮತ್ತು ಶ್ರೀಮತಿ ಜ್ಯೋತಿ ಎಸ್. ಪೊದ್ದಾರ್ ಅವರ ಪುತ್ರ. ಅಕ್ಷಯ್ ಎಸ್. ಪೊದ್ದಾರ್ ಅವರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು.

# ಸಿ.ಬಿ.ಎಸ್.ಇ. ಪರೀಕ್ಷೆಯಲ್ಲಿ ಉನ್ನತ ಅಂಕ ಪಡೆದವರು

ಈ ಬಾರಿ 2019-20ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ದೆಹಲಿ ಮತ್ತು ಎನ್.ಸಿ.ಆರ್. ಪ್ರದೇಶದಲ್ಲಿ ವ್ಯಾಸಂಗ ಮಾಡುತ್ತಿದ್ದ ಹಲವು ಕನ್ನಡದ ವಿದ್ಯಾರ್ಥಿಗಳು ಅಧಿಕ ಅಂಕ ಗಳಿಸಿದ್ದಾರೆ. ಪ್ರತಿಭಾವಂತ ವಿದ್ಯಾರ್ಥಿಗಳ ಮಾಹಿತಿ ಆಹ್ವಾನಿಸಿ ಸಂಘದಿಂದ ಸೂಚನೆ ನೀಡಲಾಗಿತ್ತು. ಲಭ್ಯವಾದ ಇವರೆಲ್ಲರ ವಿವರ ಮತ್ತು ಭಾವಚಿತ್ರಗಳನ್ನು ಇಲ್ಲಿ ಪ್ರಕಟಿಸಲಾಗಿದೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.

## ಹತ್ತನೇ ತರಗತಿ ಪರೀಕ್ಷೆಯಲ್ಲಿ ಉನ್ನತ ಅಂಕ ಪಡೆದವರು




**ಕು. ಮಾಣಿಕೇಶ್ವರಿ ಬಿ. ಹಿರೇಮಠ (95.2%)**

ಡಾ. ಬಸವರಾಜ್ ಎಸ್. ಹಿರೇಮಠ ಮತ್ತು ಡಾ. ವಿದ್ಯಾವತಿ ವಿ. ಹಿರೇಮಠ ಅವರ ಪುತ್ರಿ



**ಕು. ಪ್ರಾಂಜಲಿ ಹುನಗುಂದ್ (95%)**

ಸತೀಶ್ ಕುಮಾರ್ ಹುನಗುಂದ್ ಮತ್ತು ಶ್ರೀಮತಿ ಅಖಿಲಾ ಹುನಗುಂದ್ ಅವರ ಪುತ್ರಿ




**ಚಿನ್ಮಯ್ ಮುರಳೀಧರ ಕಡ್ನೂರ್ ರಾವ್ (94%)**

ಮುರಳೀಧರ ಆರ್. ಕಡ್ನೂರ್ ರಾವ್ ಮತ್ತು ಶ್ರೀಮತಿ ಮಾಯಾ ಕಡ್ನೂರ್ ರಾವ್ ಅವರ ಪುತ್ರ



**ಕು. ನಿಧಿ ಶ್ರೀಕಾಂತ್ (93.4%)**

ಶ್ರೀಕಾಂತ್ ಆರ್. ಮತ್ತು ಶ್ರೀಮತಿ ಲಕ್ಷ್ಮೀ ಶ್ರೀಕಾಂತ್ ಅವರ ಪುತ್ರಿ



**ಕೆ.ಎಂ. ಅಮೋಘ (92%)**

ಕೆ.ಎನ್. ಮಂಜುನಾಥ ಮತ್ತು ಶ್ರೀಮತಿ ಸೌಮ್ಯ ಎನ್.ಎಂ. ಅವರ ಪುತ್ರ



**ನವ್ಯಶ್ರೀ ಭಟ್ (92%)**

ಪ್ರಶಾಂತ್ ಭಟ್ ಮತ್ತು ಶಾಲಿನಿ ಪ್ರಶಾಂತ್ ಅವರ ಪುತ್ರಿ



**ಆರ್ಯನ್ ಕೆ.ಎ (91.6%)**

ಡಾ. ಅರುಣ್ ಕುಮಾರ್ ಕೆ.ವಿ. ಮತ್ತು ಡಾ. ದೀಪಾ ಡಿ ಅವರ ಪುತ್ರ.



**ಎಸ್. ಭುವನ್ (91.4%)**

ಎನ್. ಶ್ರೀಧರ್ ಮತ್ತು ಶ್ರೀಮತಿ ಎಂ. ಸುಮಿತ್ರ ಅವರ ಪುತ್ರ



**ಕು. ನೇಹಾ ದಯಾನಂದ (88%)**

ದಯಾನಂದ ಬಸವಲಿಂಗಯ್ಯ ಮತ್ತು ಶ್ರೀಮತಿ ವೀಣಾ ದಯಾನಂದ ಅವರ ಪುತ್ರಿ



**ಸೂರಜ್ (88%)**

ತಿಮ್ಮಪ್ಪ ಜಿ.ಆರ್ ಮತ್ತು ಶ್ರೀಮತಿ ಭಾರತಿ ಅವರ ಪುತ್ರ

## ಹನ್ನೆರಡನೇ ತರಗತಿ ಪರೀಕ್ಷೆಯಲ್ಲಿ ಉನ್ನತ ಅಂಕ ಪಡೆದವರು



**ಕು. ಮಾನಸಿ ಪ್ರಭಾಕರನ್ (98.2%)**

ಎಲ್. ಪ್ರಭಾಕರನ್ ಮತ್ತು ಶ್ರೀಮತಿ ಭಾಗ್ಯಶ್ರೀ ಪ್ರಭಾಕರನ್ ಅವರ ಪುತ್ರಿ



**ಮಹೇಶ್ ಆರ್ (97%)**

ಎಂ. ರಮೇಶ್ ಮತ್ತು ಶ್ರೀಮತಿ ಸರಸ್ವತಿ ರಮೇಶ್ ಅವರ ಪುತ್ರ



**ಆರ್. ಶ್ರೇಯಸ್ (95%)**

ಆರ್. ರೇಣುಕುಮಾರ್ ಮತ್ತು ಶ್ರೀಮತಿ ಸುಮಾ ಅವರ ಪುತ್ರ



**ಪಿ. ಕೃಷ್ಣ (94%)**

ಎಂ. ಪುರುಷೋತ್ತಮ ಮತ್ತು ಶ್ರೀಮತಿ ಪಿ. ಜೀವ ಅವರ ಪುತ್ರ



**ಯಶವಂತ ಜಿ. (93.2%)**


ಗಂಗಾಧರ್ ಮತ್ತು ಶ್ರೀಮತಿ ಸರೋಜ ಅವರ ಪುತ್ರ

# ಡಾ. ಪುರುಷೋತ್ತಮ ಬಿಳಿಮಲೆಯವರ ಆತ್ಮಕತೆ

# 'ಕಾಗೆ ಮುಟ್ಟಿದ ನೀರು'

ಹಿರಿಯ ಸಾಹಿತಿ, ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರು ಇದೇ ಆಗಸ್ಟ್ ತಿಂಗಳು ಸೇವೆಯಿಂದ ನಿವೃತ್ತಿ ಆಗಲಿದ್ದಾರೆ. ಇದೇ ಸಂದರ್ಭದಲ್ಲಿ ಅವರ ಆತ್ಮಕತೆ **'ಕಾಗೆ ಮುಟ್ಟಿದ ನೀರು'** ಪ್ರಕಟವಾಗಿದೆ. ಶಿವಮೊಗ್ಗದ ಅಹರ್ನಿಶಿ ಪ್ರಕಾಶನ ಕೃತಿಯನ್ನು ಹೊರತಂದಿದೆ. ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರೂ ಆಗಿರುವ ಡಾ. ಬಿಳಿಮಲೆಯವರ ಆತ್ಮಕತೆಗೆ ಹಿರಿಯ ಪತ್ರಕರ್ತ **ದಿನೇಶ್ ಅಮೀನ್ ಮಟ್ಟು** ಬರೆದ ಮುನ್ನುಡಿಯ ಆಯ್ದ ಭಾಗ ಇಲ್ಲಿದೆ.

**-ಸಂಪಾದಕ**




| | |
|---|---|
| ಪ್ರಕಾಶಕರು | : ಅಹರ್ನಿಶಿ ಪ್ರಕಾಶನ, ಶಿವಮೊಗ್ಗ |
| ಪುಟಗಳು | : 304 |
| ಬೆಲೆ | : ರೂ. 300/- |
| ವರ್ಷ | : 2020 |

ಆತ್ಮಚರಿತ್ರೆಗೆ ಮುನ್ನುಡಿಯ ಮುಂಭಾರ ಬೇಕೇ ಎನ್ನುವುದು ಮೊದಲ ಪ್ರಶ್ನೆ. ಈ ಮುನ್ನುಡಿಯನ್ನು ನನಗಿಂತ ಅನುಭವಿಗಳು, ಹಿರಿಯರು, ಪರಸ್ಪರ ಹೆಚ್ಚು ಬಲ್ಲವರು ಬರೆಯಬಹುದಿತ್ತಲ್ಲವೇ ಎನ್ನುವುದು ಎರಡನೆ ಪ್ರಶ್ನೆ. ಈ ಪ್ರಶ್ನೆಗಳನ್ನು ಕೇಳಲು ಅವಕಾಶವನ್ನೂ ಕೊಡದೆ ಮುನ್ನುಡಿ ಬರೆದುದಕ್ಕಾಗಿ ನನಗೆ ಕೃತಜ್ಞತೆಯನ್ನು ಮುಂಗಡವಾಗಿಯೇ ಬರೆದಿದ್ದ ಲಿಖಿತ ಪ್ರತಿಯನ್ನು ಡಾ.ಪುರುಷೋತ್ತಮ ಬಿಳಿಮಲೆಯವರು ಕಳಿಸಿಕೊಟ್ಟಿದ್ದರು.

ನಾಲ್ಕು ದಿಕ್ಕುಗಳಲ್ಲಿಯೂ ದುರ್ಜನರೇ ವಿಜೃಂಭಿಸುತ್ತಿದ್ದಾರೋ ಏನೋ ಎಂಬ ಆತಂಕದ ದಿನಗಳಲ್ಲಿ ನಮ್ಮ ಸಮಯ-ಶಕ್ತಿಗಳೆಲ್ಲ ಅಂತಹವರ ಬಗೆಗಿನ ಟೀಕೆ-ಟಿಪ್ಪಣಿ, ಆರೋಪ, ಪ್ರತ್ಯಾರೋಪಗಳಲ್ಲಿಯೇ ವ್ಯಯವಾಗುತ್ತಿರುವಾಗ ಸಜ್ಜನರ ಬಗ್ಗೆ ನಾಲ್ಕು ನಲ್ನುಡಿಗಳನ್ನಾಡುವ ಅವಕಾಶ ಸಿಗುವುದೇ ಅಪರೂಪ. ಒದಗಿಬಂದಿರುವ ಈ ಅವಕಾಶ ಬಳಸಿಕೊಂಡು ಒಳ್ಳೆಯವರ ಬಗ್ಗೆ, ಒಳ್ಳೆಯ ಮಾತುಗಳನ್ನಾಡಿ ನಾನೂ ಯಾಕೆ ಸ್ವಲ್ಪ ಒಳ್ಳೆಯವನಾಗಬಾರದೆಂಬ ಸ್ವಾರ್ಥವೂ ಬಿಳಿಮಲೆಯವರ ಆದೇಶಕ್ಕೆ ತಲೆಬಾಗಲು ಕಾರಣ.

ಕಡುಕಷ್ಟದಲ್ಲಿ ಹುಟ್ಟಿ ಸ್ವಪ್ರಯತ್ನದಿಂದ ಸಾಧನೆಯ ಶಿಖರವನ್ನೇರಿ ಜೀವನವನ್ನು ಗೆದ್ದು ನಿಂತವರು ನಮ್ಮ ನಡುವೆ ಹಲವರಿದ್ದಾರೆ. ಸಾವನ್ನು ಹೊಸ್ತಿಲಲ್ಲಿ ನಿಲ್ಲಿಸಿ ಜೀವವನ್ನು ಗೆದ್ದವರೂ ನಮ್ಮ ನಡುವೆ ಕೆಲವರಿದ್ದಾರೆ. ಆದರೆ ಜೀವನ ಮತ್ತು ಜೀವಗಳೆರಡನ್ನು ಗೆದ್ದು ನಿಂತವರು ಬಹಳ ಅಪರೂಪ. ಅಂತಹ ವಿರಳರಲ್ಲಿ ಒಬ್ಬರು ಡಾ.ಪುರುಷೋತ್ತಮ ಬಿಳಿಮಲೆ. ಜೀವನದ ಹೋರಾಟದಲ್ಲಿ ಇನ್ನೇನು ಗೆದ್ದೆ ಎನ್ನುವಾಗ ಸವಾಲೊಡ್ಡಿದ ಜೀವದ ಜೊತೆಯಲ್ಲಿಯೂ ಹೋರಾಡಿ ಗೆದ್ದವರು ಬಿಳಿಮಲೆ. ಈ ಎರಡು ಹೋರಾಟಗಳನ್ನು ಒಟ್ಟಾಗಿ ನೋಡದೆ ಪ್ರತ್ಯೇಕವಾಗಿ ನೋಡಿದರೂ ಅವರ ಬದುಕು ಅರ್ಥಪೂರ್ಣ, ಸ್ಫೂರ್ತಿದಾಯಕ.

ಜೀವನವನ್ನು ರೂಪಕಾತ್ಮಕವಾಗಿ ಪಯಣ ಅನ್ನುತ್ತೇವೆ. ಬಿಳಿಮಲೆಯವರ ಬದುಕಲ್ಲಿ ಪಯಣ ಎನ್ನುವುದು ರೂಪಕವೂ ಹೌದು, ವಾಸ್ತವವೂ ಹೌದು. ಬಿಳಿಮಲೆಯವರು ನಿಂತಲ್ಲಿ ನಿಲ್ಲುವವರು, ಕೂತಲ್ಲಿ ಕೂರುವವರಲ್ಲ, ಅವರು ಹುಟ್ಟು ಜಂಗಮ. ಎಲ್ಲಿಯೂ ಸ್ಥಾವರವಾದವರೇ ಅಲ್ಲ. ಬಂಟಮಲೆಯಿಂದ ಹೊರಟು ಪುತ್ತೂರು, ಮಂಗಳೂರು, ಮದ್ರಾಸ್, ಹಂಪಿ ಮಾರ್ಗವಾಗಿ ದೆಹಲಿ ತಲುಪಿ ಅಲ್ಲಿಂದ ನಡುನಡುವೆ ಅಮೆರಿಕ,ಜಪಾನ್,ಇಸ್ರೇಲ್ ಗಳಿಗೆ ಜಿಗಿಯುತ್ತಲೇ ಇರುವ ಬಿಳಿಮಲೆಯವರ ಜೀವನ ಪಯಣ ಹೊಸ ಪಥಿಕರಿಗೆ ಟೂರಿಸ್ಟ್ ಗೈಡ್ ನಂತಿದೆ. ಈ ಆತ್ಮಚರಿತ್ರೆಯಲ್ಲಿ ಬಿಳಿಮಲೆಯವರು ಏಕಾಂಗಿ ಅಲ್ಲ, ನಮ್ಮನ್ನು ಸಹಪಥಿಕರನ್ನಾಗಿ ಕರೆದೊಯ್ಯುತ್ತಾರೆ.

...ಮನೆಗೆ ಬಂದವರು ನೆಲದಲ್ಲಿ ಮಲಗಿದವನನ್ನು ದಾಟಿಕೊಂಡು ಹೋಗುತ್ತಿದ್ದ... ಕರ್ರಗೆ, ಕುಳ್ಳಗೆ, ಕುರೂಪಿ... ವಾಮನಮೂರ್ತಿ ಹುಡುಗ ತ್ರಿವಿಕ್ರಮನಾಗಿ ಬೆಳೆಯುತ್ತಾ ಬೆಳೆಯುತ್ತಾ ಬಂಟಮಲೆ, ಬಿಳಿಮಲೆಯನ್ನು ಹಿಂದಕ್ಕೆ ಬಿಟ್ಟು ರಾಜ್ಯ, ದೇಶದ ಗಡಿದಾಟಿ ಆಗಾಗ ವಿದೇಶಕ್ಕೂ ಹಾರಿ ಎಲ್ಲರೂ ತಿರುಗಿನೋಡುವಂತೆ ಬೆಳೆದ ಕತೆಯೇ ಹಳೆಕಾಲದ ಸಲೀಂ-ಜಾವೇದ್ ಅವರ ಹಿಂದಿ ಥ್ರಿಲ್ಲರ್ ಸಿನೆಮಾದ ಕತೆಯಂತಿದೆ.

ಇತಿಹಾಸದ ಪುಟದಲ್ಲಿ ದಾಖಲಾದವರಲ್ಲಿ ಹೆಚ್ಚಿನವರನ್ನು ವರ್ತಮಾನ ಕ್ರೂರವಾಗಿ ನಡೆಸಿಕೊಂಡದ್ದನ್ನು ಕಾಣಬಹುದು. ಇದನ್ನೇ ಇನ್ನೊಂದು ಬಗೆಯಲ್ಲಿ ವರ್ತಮಾನದ ಕ್ರೌರ್ಯಕ್ಕೆ ಬಲಿಯಾದವರೇ ಇತಿಹಾಸದ ಪುಟದಲ್ಲಿ ಉಳಿಯಲು ಸಾಧ್ಯ ಎಂದೂ ಹೇಳಬಹುದು. ಬಿಳಿಮಲೆಯವರು ವರ್ತಮಾನದ ಕ್ರೌರ್ಯವನ್ನು ಉಂಡು ಬೆಳೆದಿದ್ದರೂ ಅವೆಲ್ಲವನ್ನೂ ಬಿಚ್ಚಿಡಲು ಹೋಗಿಲ್ಲ. ಹಾಗೆ ಮಾಡಿದ್ದರೆ ಮಂಗಳೂರು,ಹಂಪಿ ಮತ್ತು ದೆಹಲಿಗಳಲ್ಲಿ ಅವರ ಆತ್ಮದ ಮೇಲೆ ಆಗಿರುವ ಗಾಯಗಳ ಗುರುತುಗಳು ನಮ್ಮನ್ನು ಬೆಚ್ಚಿಬೀಳಿಸುತ್ತಿತ್ತು. ತಾನು ತೊಟ್ಟುಕೊಂಡಿರುವ ಸಜ್ಜನಿಕೆಯ ಪೋಷಾಕನ್ನು ಕಳಚಲು ಹೋಗದೆ ಬಹಳ ಮಂದಿಯನ್ನು ಬತ್ತಲೆಯಾಗುವ ಮುಜುಗರದಿಂದ ಅವರು ಪಾರು ಮಾಡಿದ್ದಾರೆ. ಹಂಪಿಯಲ್ಲಿ ಉಂಡ ಕಹಿಯನ್ನೊಂದಿಷ್ಟು ಹೊರಹಾಕಿದ್ದು ಬಿಟ್ಟರೆ ಉಳಿದುದೆಲ್ಲವನ್ನು ನುಂಗಿ ವಿಷಕಂಠರಾಗಿದ್ದಾರೆ.

ಈ ಆತ್ಮಕತೆಯನ್ನು ಸ್ಥೂಲವಾಗಿ ಪೂರ್ವಾರ್ಧ ಮತ್ತು ಉತ್ತರಾರ್ಧ ಎಂದು ಎರಡು ಭಾಗಗಳನ್ನಾಗಿ ಮಾಡಬಹುದು. ಇದರಲ್ಲಿ ನನ್ನನ್ನು ಸೆಳೆದದ್ದು, ಬಹುಷ: ಓದುಗರನ್ನು ಕೂಡಾ ಹೆಚ್ಚು ಸೆಳೆಯುವುದು ಬಿಳಿಮಲೆಯವರ ಪೂರ್ವಾರ್ಧದ ಬದುಕು. ಆ ಬದುಕನ್ನು ಬಿಳಿಮಲೆಯವರು ಬದುಕದೆ ಹೋಗಿದ್ದರೆ ಅವರ ಉತ್ತರಾರ್ಧದ ಬದುಕಿಗೆ ಇಷ್ಟೊಂದು ಮಹತ್ವವೂ ಇರುತ್ತಿರಲಿಲ್ಲ, ಅದನ್ನು ಎದುರಿಸಲು ಬೇಕಾದ ಆತ್ಮಬಲವು ಅವರಿಗೆ ದಕ್ಕುತ್ತಿರಲಿಲ್ಲ.

ಬಾಲ್ಯದಲ್ಲಿ ಅವರಿಗೆ ಜೊತೆಯಾಗಿದ್ದ "... ಏಡಿ, ಎಟ್ಟಿ, ಮೀನು, ಹಕ್ಕಿ, ಪ್ರಾಣಿ, ಇಲಿ, ಹಾವು ಭೂತಪ್ರೇತ"ಗಳೆಲ್ಲವೂ ಉತ್ತರಾರ್ಧದ ಅವರ ಬದುಕಿನ ಬೇರೆ ಬೇರೆ ಘಟ್ಟಗಳಲ್ಲಿ ರೂಪಕಗಳಾಗಿ ಮನುಷ್ಯ ರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಬಾಲ್ಯದಲ್ಲಿ ಕಾಡಿನ ಸಂಗಾತಿಗಳನ್ನು ಎದುರಿಸಲು ಕಲಿತ ಬದುಕಿನ ಕುಸ್ತಿಯ ಪಟ್ಟುಗಳು ಈ 'ಬಿಳಿಮಲೆಯ ಬಂಟ'ನಿಗೆ ನಂತರದ ದಿನಗಳಲ್ಲಿ ಕಾಂಕ್ರೀಟ್ ಕಾಡಿನ ಸಂಗಾತಿಗಳನ್ನು ಕೂಡಾ ಎದುರಿಸಲು ನೆರವಾದ ಹಾಗಿದೆ. ಬಿಳಿಮಲೆಯವರು ಬಂಡಾಯಗಾರರಾಗಿ, ವಿಶ್ವವಿದ್ಯಾಲಯದ ಪ್ರೊಫೆಸರ್ ಆಗಿ, ಜನಪ್ರಿಯ ಲೇಖಕರಾಗಿ ಮಿಂಚುತ್ತಿದ್ದಾಗ ಅದೇ ತಾನೆ ಮುಂಗಾರು ಪತ್ರಿಕೆಗೆ ಸೇರಿದ್ದ ನಾನು ಬೆರಗು ಕಣ್ಣುಗಳಿಂದ ಅವರನ್ನು ನೋಡುತ್ತಾ ಬಂದವನು. ಇಬ್ಬರೂ ಮಂಗಳೂರು ಬಿಟ್ಟ ನಂತರ ಎಷ್ಟೋ

> "ಬಿಳಿಮಲೆಯವರ ಪ್ರೀತಿಯ ಕಾಯಕವೆಂದರೆ ಕಟ್ಟುವುದು. ಕೆಡವುವವರು ಒಮ್ಮೊಮ್ಮೆ ವರ್ತಮಾನದಲ್ಲಿ ವಿಜೃಂಭಿಸಿ ಬಿಡುತ್ತಾರೆ, ಕಟ್ಟುವವರ ಪಾಲಿಗೆ ವರ್ತಮಾನ ಕ್ರೂರವಾಗಿದ್ದರೂ ಇತಿಹಾಸ ನೆನಪಲ್ಲಿಟ್ಟುಕೊಳ್ಳುತ್ತದೆ."

ಸಮಯ ಮುಖಾಮುಖಿಯೇ ಆಗಿರಲಿಲ್ಲ. ನನಗೆ ದೆಹಲಿಗೆ ವರ್ಗಾವಣೆಯಾದಾಗ ಮತ್ತೆ ಇವರನ್ನು ಕಂಡೆ. ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳ ಪಟ್ಟಿಯಲ್ಲಿ ಅವರ ಹೆಸರು ಕೊನೆಯಲ್ಲಿ ನೋಡಿದ್ದಾಗ ಪಿಚ್ಚೆನಿಸಿತ್ತು. ಕ್ಯಾಪ್ಟನ್ ಆಗಬೇಕಾಗಿದ್ದವರು ಎಕ್ಸ್ ಟ್ರಾ ಪ್ಲೇಯರ್ ತರ ಇದ್ದರಲ್ಲಾ ಎಂದು ಅನಿಸಿತ್ತು.

ಆಗಿನ ದಿನಗಳಲ್ಲಿ ಕರ್ನಾಟಕ ಸಂಘದ ಬಗ್ಗೆ ಬಗೆಬಗೆಯ ಆರೋಪಗಳು ಹರಿದಾಡುತ್ತಿದ್ದವು. ಒಂದು ದಿನ ಬಿಳಿಮಲೆಯವರನ್ನು ನೋಡಿದಾಗ ದು:ಖವಾಗಿತ್ತು. ಅವರು ಸೊರಗಿಹೋಗಿದ್ದರು, ಕಾಲುಗಳಲ್ಲಿ ಊತ ಇತ್ತು, ನಡೆಯಲು ಕಷ್ಟವಾಗುತ್ತಿತ್ತು. ಆದರೆ ಕೆಲವು ಸಮಯದ ನಂತರ ನೋಡಿದರೆ ಅವರು ಇನ್ನೊಂದು ಧಿಗಣ ಹಾಕಿ ಕರ್ನಾಟಕ ಸಂಘದ ಚುನಾವಣಾ ರಂಗಸ್ಥಳ ಪ್ರವೇಶಿಸಿಯೇ ಬಿಟ್ಟಿದ್ದರು. ಜೀವನುದ್ದಕ್ಕೂ ಬಿಳಿಮಲೆಯವರು ಇಂತಹ ಅಚ್ಚರಿಗಳನ್ನು ಕೊಡುತ್ತಲೇ ಬಂದಿದ್ದಾರೆ.

ಬಿಳಿಮಲೆಯವರ ಪ್ರೀತಿಯ ಕಾಯಕವೆಂದರೆ ಕಟ್ಟುವುದು. ಕೆಡವುವವರು ಒಮ್ಮೊಮ್ಮೆ ವರ್ತಮಾನದಲ್ಲಿ ವಿಜೃಂಭಿಸಿ ಬಿಡುತ್ತಾರೆ, ಕಟ್ಟುವವರ ಪಾಲಿಗೆ ವರ್ತಮಾನ ಕ್ರೂರವಾಗಿದ್ದರೂ ಇತಿಹಾಸ ನೆನಪಲ್ಲಿಟ್ಟುಕೊಳ್ಳುತ್ತದೆ. ಬಿಳಿಮಲೆಯವರು ಮೊದಲು ಹಂಪಿ ವಿಶ್ವವಿದ್ಯಾಲಯವನ್ನು, ನಂತರ ದೆಹಲಿ ಕರ್ನಾಟಕ ಸಂಘವನ್ನು, ಅದರ ನಂತರ ಅಮೆರಿಕನ್ ಅಧ್ಯಯನ ಸಂಸ್ಥೆಯನ್ನು ಇತ್ತೀಚೆಗೆ ಜೆ.ಎನ್.ಯು.ವಿನ ಕನ್ನಡ ಪೀಠವನ್ನು ಕಟ್ಟಿದರು. ಇದರ ನಡುವೆ ಸಣ್ಣಪುಟ್ಟ ಸುಮಾರು ಕಟ್ಟೋಣಗಳನ್ನು ಕಟ್ಟಿದ್ದಾರೆ.

ಬಿಳಿಮಲೆಯವರು ಮೂಲತ: ಒಬ್ಬ ಮೇಸ್ಟ್ರು, ನಂತರ ಸಾಹಿತಿ, ಸಂಶೋಧಕ, ಭಾಷಣಕಾರ, ಸಂಘಟಕ, ಹೋರಾಟಗಾರ ಎಲ್ಲವೂ ಆದವರು. ಈ ಬಹುರೂಪಗಳ ಅವತಾರಗಳಲ್ಲಿ ಅವರು ಸಂಘಟನಕಾರರಾಗಿಯೇ ಹೆಚ್ಚು ಕೆಲಸಮಾಡಿದ ಕಾರಣದಿಂದಾಗಿ ಅವರೊಳಗಿನ ಬರಹಗಾರನಿಗೆ ಸಮಯ ಕೊಡಲು ಸಾಧ್ಯವಾಗಲಿಲ್ಲ. ಈ ಕೊರಗು ಅವರಲ್ಲಿಯೂ ಇದೆ. ಆದರೆ ಬರವಣಿಗೆಗಾಗಿಯೇ ತಮ್ಮನ್ನು ಪೂರ್ಣವಾಗಿ ಅರ್ಪಿಸಿಕೊಂಡಿದ್ದರೆ ನಮಗೆ ಓದಲು ಇನ್ನಷ್ಟು ಪುಸ್ತಕಗಳು, ಅವರಿಗೆ ಇನ್ನಷ್ಟು ಪ್ರಶಸ್ತಿಗಳು ಬರುತ್ತಿದ್ದವೋ ಏನೋ? ಅಷ್ಟರಮಟ್ಟಿಗೆ ನಮಗೆ ಮತ್ತು ಅವರಿಗೆ ನಷ್ಟ.

ಆದರೆ ಸಂಘಟನಕಾರ ಬಿಳಿಮಲೆಯವರು ಇಲ್ಲದೆ ಇದ್ದಿದ್ದರೆ ಅವರು ಕಟ್ಟಿರುವ ಅನೇಕ ಸಂಸ್ಥೆಗಳು ಈಗಿನ ರೂಪದಲ್ಲಿ ಖಂಡಿತ ಇರುತ್ತಿರಲಿಲ್ಲ. ಕರ್ನಾಟಕದ ರಾಯಭಾರಿ ರೀತಿಯಲ್ಲಿ ಮೋತಿಭಾಗ್ ನಲ್ಲಿ ಕರ್ನಾಟಕ ಸಂಘದ ಬೃಹತ್ ಕಟ್ಟಡ ತಲೆ ಎತ್ತಿ ಮೆರೆಯುತ್ತಿದ್ದರೆ, ಅದಕ್ಕೆ ರಾಷ್ಟ್ರಮಟ್ಟದಲ್ಲಿ ಸಾಂಸ್ಕೃತಿಕ ಮಹತ್ವ ದಕ್ಕಿದ್ದರೆ ಅದಕ್ಕೆ ಕಾರಣಕರ್ತರು ಬಿಳಿಮಲೆಯವರು. ಆ ಕಾಲದಲ್ಲಿ ಬಿಳಿಮಲೆ ತಮ್ಮ ಆರೋಗ್ಯವನ್ನು ನಿರ್ಲಕ್ಷಿಸಿ ಹಗಲುರಾತ್ರಿ ಪಟ್ಟ ಶ್ರಮಕ್ಕೆ ನಾನು ಸಾಕ್ಷಿ. ಆ ನಿರ್ಲಕ್ಷ್ಯದ ಫಲವನ್ನು ಅವರು ಇಂದು ಅನುಭವಿಸುತ್ತಿದ್ದಾರೆ. ಅದೇ ರೀತಿ ಜವಾಹರಲಾಲ ವಿಶ್ವವಿದ್ಯಾಲಯದ ಕನ್ನಡ ಪೀಠ. ಅಲ್ಪಾವಧಿಯಲ್ಲಿಯೇ ತನ್ನೆಲ್ಲ ಅನುಭವ,ಸಂಪರ್ಕ ಮತ್ತು ವಿದ್ವತ್ತನ್ನು ಬಳಸಿಕೊಂಡು ದೇಶದ ಎಲ್ಲ ಭಾಷಿಕರು ಕನ್ನಡದ ದನಿಗೆ ಕಿವಿಗೊಡುವಂತೆ ಮಾಡಿದವರು ಬಿಳಿಮಲೆಯವರು. ಈ ಸಂಸ್ಥೆಯ ಮೇಲೆ ಫ್ಯಾಸಿಸ್ಟ್ ಶಕ್ತಿಗಳು ಎರಗಿಬಿದ್ದಾಗ ಕನ್ನಡದ ಸಾಕ್ಷಿಪ್ರಜ್ಞೆಯ ರೂಪದಲ್ಲಿ ನಮ್ಮೆಲ್ಲರ ಪ್ರತಿನಿಧಿಯಾಗಿ ಅಲ್ಲದ್ದು ನಮ್ಮ ಬೆಂಬಲವನ್ನು ಧಾರೆಯೆರೆದು ನಮಗೆ ನಾವೇ ಹೆಮ್ಮೆ ಪಡುವಂತೆ ಮಾಡಿದವರು. ಈರೀತಿ ದೇಶದ ರಾಜಧಾನಿಯಲ್ಲಿ ಕಳೆದುಹೋಗಿದ್ದ ಕನ್ನಡಿಗನಿಗೆ ಗುರುತು ತಂದುಕೊಟ್ಟ ಕೀರ್ತಿ ಬಿಳಿಮಲೆಯವರಿಗೆ ಸಲ್ಲಬೇಕು.

ಸಾರ್ವಜನಿಕ ಜೀವನದಲ್ಲಿರುವವರ ಬಗ್ಗೆ ಸುಲಭದಲ್ಲಿ ಒಂದಷ್ಟು ಆರೋಪಗಳು ಕೇಳಬರುತ್ತವೆ. ಇದು ಪ್ರಾಮಾಣಿಕರನ್ನು ಹಣಿಯುವ ಜನಪ್ರಿಯ ಹುನ್ನಾರ ಕೂಡಾ ಹೌದು. ಹಂಪಿಯಲ್ಲಿ ನಡೆದಿರುವ ಕೆಲವು ಘಟನೆಗಳು ಓದಿದಾಗ ನೋವಾಗುತ್ತದೆ.

ಬಿಳಿಮಲೆಯವರು ಕಡುಸ್ವಾಭಿಮಾನಿ, ಅಷ್ಟೇ ಪ್ರಾಮಾಣಿಕ. ಇದಕ್ಕೆ ಸಂಬಂಧಿಸಿದ ನನ್ನ ಅನುಭವವನ್ನು ಇಲ್ಲಿ ದಾಖಲಿಸಲೇಬೇಕಾಗಿದೆ. ಬಿಳಿಮಲೆಯವರಿಗೆ ಕಿಡ್ನಿ ಕಸಿ ನಡೆದಾಗ ಆರ್ಥಿಕವಾಗಿ ಸಂಕಷ್ಟದಲ್ಲಿದ್ದರು. ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಒಂದಷ್ಟು ದುಡ್ಡು ಕೊಡಿಸಬಹುದೆಂಬ ಆಲೋಚನೆ ನನಗೆ ಬಂದಿತ್ತು. ಇದನ್ನು ಬಿಳಿಮಲೆಯವರ ಜೀವದ ಗೆಳೆಯರಾದ ಶ್ರೀನಿವಾಸ ಕಾರ್ಕಳ ಅವರ ಜೊತೆ ಪ್ರಸ್ತಾಪಿಸಿದ್ದೆ. ಅವರು 'ಕೇಳಿನೋಡಿ' ಎಂದರು. ನಾನು ಕೇಳಿದೆ, ಬಿಳಿಮಲೆಯವರು ಒಂದೇ ಮಾತಿನಲ್ಲಿ ಬೇಡ ಎಂದು ಬಿಟ್ಟರು. ಬಿಳಿಮಲೆಯವರಿಗಿಂತ ಆರ್ಥಿಕವಾಗಿ ಸ್ಥಿತಿವಂತರಾಗಿದ್ದ ಕೆಲವು ಸಾಹಿತಿಗಳು ಈ ನೆರವಿಗಾಗಿ ಹೇರಿದ್ದ ಒತ್ತಡವನ್ನು ನಾನು ಅನುಭವಿಸಿರುವ ಕಾರಣ ಬಿಳಿಮಲೆಯವರ ನಿರಾಕರಣೆಯ ಮಹತ್ವ ಏನೆಂಬುದನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ.

ಈ ಆತ್ಮಚರಿತ್ರೆಯಲ್ಲಿ ನಮ್ಮ ಮನಸನ್ನು ತೇವಗೊಳಿಸುವ ಸಣ್ಣ ಪ್ರೇಮಕತೆಯೊಂದಿದೆ. ಸಾವಿನ ಮನೆಯಿಂದ ಸಾಸಿವೆ ತಂದವರು ಮತ್ತು 'ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುತ್ತೇನೆ' ಎಂದು ಹೇಳದೆ ಇದ್ದ ಪ್ರೇಮಿಗಳು ಈ ಜಗತ್ತಿನಲ್ಲಿ ಎಲ್ಲೂ ಸಿಗಲಾರರು. ಈ ಭಾಷೆಯನ್ನು ಉಳಿಸಿಕೊಂಡವರೆಷ್ಟು ಎನ್ನುವುದನ್ನು ಹುಡುಕಲು ಹೋದರೆ ಅದಕ್ಕೆ ಕೊನೆಯಿರಲಾರದು. ಶೋಭನಾ ಮತ್ತು ಬಿಳಿಮಲೆಯವರು ಖಂಡಿತ ಇಂತಹ ಭಾಷೆ ಕೊಟ್ಟುಕೊಂಡೇ ಒಂದಾಗಿರುತ್ತಾರೆ. ಆದರೆ ಆ ಭಾಷೆಯನ್ನು ನಡೆಸಿಕೊಡುವ ಗಳಿಗೆ ಎದುರಾದಾಗ ತನ್ನ 'ಸತ್ಯವಾನ'ನನ್ನು ಉಳಿಸಲು 'ಸಾವಿತ್ರಿ' ಯಮಧರ್ಮರಾಯನನ್ನು ಹುಡುಕಿಕೊಂಡು ಹೋಗಿ ಪ್ರಾಣಭಿಕ್ಷೆ ಕೇಳುವುದಿಲ್ಲ, ತನ್ನನ್ನು ಅರ್ಪಿಸಿಕೊಂಡುಬಿಡುತ್ತಾರೆ. 'ಅಂದು ಹೃದಯ ಕೊಟ್ಟಿದ್ದಳು,ಇಂದು ಕಿಡ್ನಿ ಕೊಟ್ಟಳು' ಎಂದು ಬಿಳಿಮಲೆಯವರು ಇದನ್ನು ತಮಾಷೆಯಾಗಿ ಹೇಳಿದರೂ ಅವರಿಗೆ ಗೊತ್ತಿದೆ ತನ್ನ ಹೆಂಡತಿ ಕೊಟ್ಟಿರುವುದು ಕಿಡ್ನಿ ಅಲ್ಲ ಜೀವವನ್ನು ಎಂದು.

ಸದಾ ಚಿಮ್ಮುತ್ತಿರುವ ಎಂದೂ ಬತ್ತದ ಜೀವನಾಸಕ್ತಿ ಮತ್ತು ಹೋರಾಟದ ಛಲದ ಗುಟ್ಟೇನು ಎನ್ನುವುದನ್ನು ಬಿಳಿಮಲೆಯವರು ಬಿಡಿಸಿಹೇಳದೆ ಇದ್ದರೂ ಅವರ ಬದುಕಿನ ಕಥನದಲ್ಲಿಯೇ ಅದಕ್ಕೆ ಉತ್ತರ ಇದೆ. ಹೆತ್ತ ತಂದೆತಾಯಿ, ಒಡಹುಟ್ಟಿದ ಸೋದರ-ಸೋದರಿಯರಿಂದ ಹಿಡಿದು ಕೈಹಿಡಿದ ಪತ್ನಿವರೆಗೆ ಬಿಳಿಮಲೆಯವರ ಬದುಕಿನುದ್ದಕ್ಕೂ ಜೊತೆಯಾಗಿ ನಿಂತ ಜೀವಗಳಿಲ್ಲದೆ ಹೋಗಿದ್ದರೆ ಇಷ್ಟೊಂದು ದುರ್ಗಮವಾದ ಹಾದಿಯನ್ನು ಕ್ರಮಿಸಲು ಅವರಿಗೆ ಕಷ್ಟವಾಗುತ್ತಿತ್ತು..

..ಪುರುಷೋತ್ತಮ ಬಿಳಿಮಲೆಯವರ ಮಾತು ಮತ್ತು ಬರವಣಿಗೆಯನ್ನು ಇಡೀ ಕರ್ನಾಟಕ ಕಂಡಿದೆ. ವಿದ್ವತ್ ಉಳ್ಳವರೆಲ್ಲರೂ ಒಳ್ಳೆಯ ಸಂವಹನಕಾರರಾಗಿ ಇರಬೇಕಾಗಿಲ್ಲ. ಬಿಳಿಮಲೆಯವರು ಒಬ್ಬ ಅದ್ಭುತ ಸಂವಹನಕಾರ, ಬಹುಷ: ಈ ಸಂವಹನದ ಕಲೆಯನ್ನು ಅವರು ರೂಢಿಸಿಕೊಂಡಿರುವುದು ಬಾಲ್ಯದಿಂದಲೇ ಬೆಳೆಸಿಕೊಂಡು ಬಂದ ಯಕ್ಷಗಾನ-ತಾಳಮದ್ದಲೆಯ ನಂಟನಿಂದ. ಯಕ್ಷಗಾನದಲ್ಲಿ ಪಾತ್ರದಾರಿಗಳನ್ನು ಅರ್ಥಧಾರಿಗಳೆಂದೂ ಕರೆಯುತ್ತಾರೆ. ಪಾತ್ರಧಾರಿ ಕೇವಲ ಪಾಂಡಿತ್ಯ ಪ್ರದರ್ಶನ ಮಾಡದೆ ವೀಕ್ಷಕರಿಗೆ ಕತೆಯನ್ನು ಅದರ ಒಳನೋಟಗಳನ್ನು ಅರ್ಥಮಾಡಿಕೊಡುತ್ತಾನೆ.

ಈ ಆತ್ಮಚರಿತ್ರೆಯ ಸೊಗಸೆಂದರೆ ಇಡೀ ಆತ್ಮಚರಿತ್ರೆಯನ್ನು ಓದಿ ಮುಗಿಸಿದಾಗ ರಾತ್ರಿಯಿಡೀ ಕೂತು ಒಂದು ಯಕ್ಷಗಾನ ನೋಡಿ ಮುಗಿಸಿದ ಹಾಗಾಗುತ್ತದೆ. ಸಾಮಾನ್ಯವಾಗಿ ಯಕ್ಷಗಾನ ಮುಗಿದ ಮೇಲೂ ಭಾಗವತರ ಪದ, ಪಾತ್ರಧಾರಿಯ ಅರ್ಥ, ಚಂಡೆ-ಮದ್ದಲೆಯ ನಾದ ಕೇಳುತ್ತಲೇ ಇರುತ್ತದೆ. ಹಾಗೆಯೇ ಬಿಳಿಮಲೆಯವರ ಆತ್ಮದ ತುಣುಕುಗಳು ನಮ್ಮನ್ನು ಕಾಡುತ್ತಲೇ ಇರುತ್ತದೆ. ಇಂತಹದ್ದೊಂದು ಬದುಕು ಬದುಕಿದ್ದಕ್ಕಾಗಿ ಪುರುಷೋತ್ತಮ ಬಿಳಿಮಲೆಯವರಿಗೆ ನಾವು ಕೃತಜ್ಞರಾಗಿರಬೇಕು.

***ದಿನೇಶ್ ಅಮೀನ್ ಮಟ್ಟು***
*(ಮುನ್ನುಡಿಯಿಂದ)*




## ವಿರಳ ಅನುಭೂತಿ

ಈ ದೇಶದ ಮಣ್ಣಿನ ಮೂಲದ ಸುಡು ಸುಡು ಅನಿಷ್ಟಗಳಾದ ಅಸಮಾನತೆ, ಅವಹೇಳನ, ಹಸಿವುಗಳ ಅನಾವರಣ ಇಲ್ಲದಿದ್ದರೂ, ಪುಟ ಪುಟಗಳಲ್ಲಿ ಸೂಸುವ ಅಪ್ಪಟ ಮಾನವೀಯತೆ ಆವರಿಸಿ ಆಲಂಗಿಸಿ ಮನಸ ತೋಯಿಸಿಬಿಡುತ್ತದೆ. ಅಭಿವ್ಯಕ್ತಗೊಳ್ಳುವ ಆತ್ಮೀಯತೆ, ಅಮಾಯಕತೆ, ಪುಟಿದೇಳುವ ಜೀವನೋತ್ಸಾಹ, ಆತ್ಮೋನ್ನತಿಯ ತುಡಿತ, ವ್ಯಥೆ, ವಿಷಾದ, ಹರ್ಷ, ಉಲ್ಲಾಸ ಭಾವಗಳು ಓದುಗನ ಭಾವಗಳೂ ಆಗಿಸುವಲ್ಲಿ ಈ ಬರೆಹದ ಸಾರ್ಥಕತೆಯಿದೆ. ಬಂಟಮಲೆಯ ಬುಡದ ಬಿಳಿಮಲೆಯ ಕಗ್ಗಾಡಿನ ಹೈದನೊಬ್ಬ ಆತ್ಮವಿಶ್ವಾಸದ ಬಲದಿಂದ ಆಗಸಕ್ಕೆ ನಿಚ್ಚಣಿಕೆಯನಿರಿಸಿ ಏರುವ ಪರಿ ಬೆರಗು ಹುಟ್ಟಿಸುತ್ತದೆ. ಈಗಲೂ ಹಳ್ಳಗಾಡಿನಲ್ಲಿ ಅರಳಿ ದಿಕ್ಕುಗಾಣದೆ ತೊಳಲುವ ಕಾಡ ಕುಸುಮಗಳ ಪಾಲಿಗೆ ಬಿಳಿಮಲೆಯವರ ಬದುಕು ಹೊಳೆಹೊಳೆವ ಸ್ಫೂರ್ತಿಗಾಥೆ. ದೆಹಲಿಯಲ್ಲಿ ಇಪ್ಪತ್ತೈದು ವರ್ಷಗಳಿಂದ ನಾನು ಕಂಡ ಅವರ ಕ್ರಿಯಾಶೀಲತೆ ದಂಗುಬಡಿಸಿದೆ. ಮಧುಮೇಹವೆಂಬ ರೋಗವಲ್ಲದ ರೋಗ ಅವರನ್ನು ಕಾಡಿ ಕೆಡವಿದರೂ ಪುಟಿದೆದ್ದು ಅದನ್ನು ಚಿತ್ತು ಮಾಡಿದವರು ಬಿಳಿಮಲೆ. ಪಾದರಸದಂತೆ ಬದುಕಿನಲ್ಲಿ ಬರೆಹದಲ್ಲಿ ಸಂಸ್ಥೆಗಳನ್ನು ಕಟ್ಟುವಲ್ಲಿ ಅವರಷ್ಟು ಕ್ರಿಯಾಶೀಲರಾಗಿ ತೊಡಗಿ ಹಿಡಿದ ಕೆಲಸ ಸಾಧಿಸಿದ ಮತ್ತೊಬ್ಬರನ್ನು ನನ್ನ ಸಮೀಪದ ಸುತ್ತಮುತ್ತಲಿನಲ್ಲಿ ನಾನಂತೂ ಕಂಡಿಲ್ಲ. ಜೆ.ಎನ್.ಯು. ಕನ್ನಡ ಪೀಠ ಮತ್ತು ದೆಹಲಿ ಕರ್ನಾಟಕ ಸಂಘದ ಕಟ್ಟಡ ಈ ಮಾತಿಗೆ ಎದೆಯುಬ್ಬಿಸಿ ಸಾಕ್ಷಿ ನುಡಿವ ಉದಾಹರಣೆಗಳು. ಸಾಹಿತ್ಯ– ಸಂಶೋಧನೆಯ ಜೊತೆಗೆ ಸಾಮಾಜಿಕ ಎಚ್ಚರ ಕಾಯ್ದುಡಲು ಅವರು ನೀಡಿರುವ– ನೀಡುತ್ತಿರುವ ಕೊಡುಗೆಯನ್ನು ಇತಿಹಾಸ ತಪ್ಪದೆ ಗುರುತಿಸಲಿದೆ.
"ಕಾಗೆ ಮುಟ್ಟಿದ ನೀರು" ಆತ್ಮಕತೆಯ ತುಣುಕುಗಳಲ್ಲಿ ಅನಾವರಣವಾಗಿರುವ ಬಿಳಿಮಲೆಯವರಿಗಿಂತಲೂ ಅಧಿಕ ಉತ್ತಮ ಉದಾತ್ತ ಸ್ವಸ್ಥ ಹಾಗೂ ದಿಟ್ಟ ಮನಸಿನ ಬಿಳಿಮಲೆಯವರನ್ನು ನಾನು ವ್ಯಕ್ತಿಗತವಾಗಿ ನೋಡಿ ಒಡನಾಡಿ ಬಲ್ಲೆ. ಕಾಗೆ ಮುಟ್ಟಿದ ನೀರನ್ನು ಓದುವುದು ಒಂದು ವಿರಳ ಅನುಭೂತಿ.

***ಡಿ. ಉಮಾಪತಿ***
***(ಬೆನ್ನುಡಿಯಿಂದ)***

## ನಿರೂಪಣೆಯ ಜೀವಂತಿಕೆ ಆಪ್ತ

ಕತೆ ಬರೆಯುವುದು ಸುಲಭ. ಆತ್ಮಕತೆ ಬರೆಯುವುದು ಕಷ್ಟ ಎನ್ನುವ ಮಾತಿದೆ. ಬದುಕಿನ ಸಂಕೀರ್ಣತೆಯನ್ನು ಬಯಲಾಗಿಸುವುದು ಸುಲಭವಲ್ಲ. ನಡೆದ ಹಾದಿಯನ್ನು ಹಾಸ್ಯ ಬೆರೆತ ನಿರ್ಲಿಪ್ತತೆಯಿಂದ ಅಳೆಯಬಲ್ಲ ಬಿಳಿಮಲೆಯವರ ನಿರೂಪಣೆಯ ಜೀವಂತಿಕೆ ತುಂಬಾ ಆಪ್ತವೆನಿಸುತ್ತದೆ.

***ಸುಕನ್ಯಾ ಕನಾರಳ್ಳಿ***
***(ಬೆನ್ನುಡಿಯಿಂದ)***

## ಕಣ್ಣ ಪಸೆಯೊಳಗೆ ಉಳಿವ ರೂಪಕಗಳಂತ ಎರಡು ಬಿಂಬಗಳು

'ಕಾಗೆ ಮುಟ್ಟಿದ ನೀರು' ಓದಿ ಕೆಳಗಿಟ್ಟ ಮೇಲೂ ಕಣ್ಣ ಪಸೆಯೊಳಗೆ ಉಳಿವ ರೂಪಕಗಳಂತ ಎರಡು ಬಿಂಬಗಳು–ಬಂಟಮಲೆಯ ಒಂಟಿ ಕಾನನದ ಮನೆಯಲ್ಲಿ ಇಲಿಯೊಂದಿಗೆ ಸಂಭಾಷಿಸಿ ಹಾವನ್ನು ಎದುರಿಸಿ ನಿಂತ ಆ ಪುಟ್ಟ ಬಾಲಕ ಮತ್ತು ದೆಹಲಿಯ ರೈಲನ್ನೇರಿ ಹೊರಟು ಹೋದ ಆ ಕ್ಷಣ. ಉಯ್ಯಾಲೆಯ ಮೇಲು ಜೀಕುವಿನಂತೆ ಹೇಳಿಸಿಕೊಳ್ಳುವ ಕಥನದ ಕ್ಯಾನ್ವಾಸ್‌ನ ಹಿನ್ನಲೆಯಲ್ಲಿ ಮಸುಕಾದ ಅಮ್ಮ ಮತ್ತು ಶೋಭನಾರ ಪಠಗಳು. ಮುನ್ನೆಲೆಯ ಪಯಣದಲ್ಲಿ ಆಗಾಗ ಬಿರುಗಾಳಿಯ ಸದ್ದು.


***ಸಬಿತಾ ಬನ್ನಾಡಿ***
***(ಬೆನ್ನುಡಿಯಿಂದ)***

## ಜೀವನ ಪ್ರೇಮ

ಐವತ್ತರ ದಶಕದಲ್ಲಿ ಅದೂ ಕುಗ್ರಾಮವೊಂದರಲ್ಲಿ ಹುಟ್ಟಿದ ತನ್ನ ಜೀವಿತಾವಧಿಯಲ್ಲಿ ಬರೇ ಭಾಷೆ ಮತ್ತು ಜೀವನ ಪ್ರೇಮದಿಂದಲೇ ಏನನ್ನೆಲ್ಲಾ ಸಾಧಿಸಬಹುದು ಎಂಬುದಕ್ಕೆ ಬಿಳಿಮಲೆ ಜೀವಂತ ಸಾಕ್ಷಿ.

***ದಿನೇಶ್ ಶೆಣೈ***
***(ಬೆನ್ನುಡಿಯಿಂದ)***

# ಆತ್ಮಕತೆಗೆ ಹರಿದು ಬಂದ ಪ್ರತಿಕ್ರಿಯೆಗಳು



ತಾವು ಪಟ್ಟ ಕಷ್ಟಗಳನ್ನೇ ಪುಟಗಟ್ಟಲೆ ವರ್ಣಿಸುವ/ ವೈಭವೀಕರಿಸುವ ಬದಲು ಈ ಕೃತಿಯಲ್ಲಿ ನಿಮ್ಮ ಕಲಿಕಾ ಬೆಳವಣಿಗೆಯ ಪ್ರಕ್ರಿಯೆಗಳನ್ನು ತೆರೆದಿಡುವ ಮೂಲಕ ನಮ್ಮ ಜ್ಞಾನದ ಹರಹನ್ನು ಹೆಚ್ಚಿಸಿರುವುದು ಪ್ರಶಂಸನೀಯ.

***ಊರ್ಮಿಳಾ ಶಿಶಿಲ***

ತಮ್ಮ ಬಾಲ್ಯ, ಬಡತನ, ಕಾಡಿನ ವಸತಿಯ ಪಡಿಪಾಟಲುಗಳನ್ನು ನಿರ್ಭಾವುಕವಾಗಿ ವಿವರಿಸುವ ಈ ಬಿಳಿಮಲೆ ಸಾಹೇಬರು... ಕತೆ ಕಾದಂಬರಿಗಳನ್ನೇಕೆ ಬರೆಯಲಿಲ್ಲವೋ...!

***ಅಶೋಕ್ ಶೆಟ್ಟರ್***

ಬದುಕಿನ ಕುರಿತು, ವ್ಯಕ್ತಿಗಳ ಕುರಿತು ಕಹಿ ಇಟ್ಟುಕೊಳ್ಳದೆ ಎಲ್ಲವನ್ನು ಗುಣಾತ್ಮಕವಾಗಿ ನೋಡುವ ಬಿಳಿಮಲೆಯವರ ಬಗ್ಗೆ ಗೌರವ ಮೂಡುತ್ತದೆ.

***ಸುಮಿತ್ರ ಎಲ್.ಸಿ.***

ಒಂದು ತುಂಬು ಬದುಕಿನ ಅಂತಃಶಕ್ತಿಯನ್ನು ಅಲ್ಲಿ ಬರುವ ಬುದ್ಧಿವಂತಿಕೆ, ದಡ್ಡತನ, ದಡ್ಡತನದೊಳಗಣ ಪ್ರೀತಿ, ಜೋಕು, ವಿಡಂಬನೆ ಮುಂತಾದವುಗಳಿಂದ ಕೃತಿಯು ಹೇಳುತ್ತಾ ಹೋಗುತ್ತದೆ.

***ಅರವಿಂದ ಚೊಕ್ಕಾಡಿ***

ಈ ಹೊಸ ಪೀಳಿಗೆಯ ಭಾಷಾ ಉಪನ್ಯಾಸಕರು ತಾವೆಲ್ಲಿ ಹಾದಿತಪ್ಪಿದ್ದೇವೆ ಎಂಬ ನಿಟ್ಟಿನಲ್ಲಿ ಯೋಚಿಸಲು, ಬಿಳಿಮಲೆಯವರ ಈ ಆತ್ಮಚರಿತ್ರೆ ಪ್ರೇರಕವಾಗಲಿ ಎಂಬ ಒಂದು ಕ್ಷೀಣ ಆಸೆ?

***ರಾಜಾರಾಮ್ ತಲ್ಲೂರು***

ಆಳಕ್ಕೆ ಇಳಿದು ಭಾವತೀವ್ರತೆ ಉಂಟುಮಾಡಿದ 'ಕಾಗೆ ಮುಟ್ಟಿದ ನೀರು'.

***ಸಾಸಿವೆಹಳ್ಳಿ ಸತೀಶ್***

ಇಂತಹ ಮನುಷ್ಯ ನೊಬ್ಬ ನಮ್ಮ ನಡುವೆ ಹುಟ್ಟಿ,ನಡೆದು,ಓದಿ ಈ ಪರಿ ಬೆಳೆದಿದ್ದಾನೆಂದರೆ ನಮ್ಮ ಜನ ನಂಬಲಿಕ್ಕಿಲ್ಲವೇನೋ. ಒಂದಿಷ್ಟು ಪ್ರೀತಿ ಮಾತ್ರ ಕೊಡಲಿಕ್ಕಾಗುವುದು ಸರ್.ಯಾವತ್ತಾದರೂ ಸಿಕ್ಕಿದರೆ ಪ್ರೀತಿಯ ಅಪ್ಪುಗೆಗಳನ್ನ ಕೊಡಬಲ್ಲೆ !

***ತಿರುಮಲೇಶ್ ಭಟ್***

ಮರೆತೇನೆಂದರೂ ಮರೆಯಲಾಗದೆ ಅಲ್ಲಿನ ಆಪ್ತ ಚಿತ್ರಣಗಳು ನನ್ನ ಮನದಾಳದಲ್ಲಿ ನೆಲೆ ನಿಂತಿವೆ. ಅವರ ಬಾಲ್ಯದ ಬಡತನ, ಕಾರ್ಪಣ್ಯ, ಕಾಡಿನ ಅನುಭವ, ಶಾಲೆ ಕಲಿಯುವಾಗಿನ ಪರಿಪಾಟಲು ನನ್ನನ್ನು ಬೆಚ್ಚಿ ಬೀಳಿಸಿವೆ.

***ಆರ್. ಭರತಾದ್ರಿ***

ಬಾಲ್ಯದಿಂದಲೂ ಬುತ್ತಿ ಕಟ್ಟಿಕೊಂಡು ತಂದ ಅನಾರೋಗ್ಯವನ್ನು ಇದುವರೆಗಿನ ಜೀವನದವರೆಗೆ ಗೊಣಗದೆ ಉಣ್ಣುತ್ತಿರುವ ಬಿಳಿಮಲೆ ಓರ್ವ ಅಪರೂಪದ ಸಾಹಸಿಯಂತೆ ಕಾಣುತ್ತಾರೆ.

***ಅಗ್ರಹಾರ ಕೃಷ್ಣಮೂರ್ತಿ***

ಅಧ್ಯಯನ, ಅನುಭವ, ಅಥವಾ ತಿಳಿವಿನ ಮೂಲಕ ಆಗಮಿಸುವ, ದಕ್ಕುವ ಜ್ಞಾನೋದಯ, ಒಂದು ಬಗೆಯ ಬಿಡುಗಡೆಯ ಭಾವವನ್ನು, ನಿರಾಳ, ಮೌನದ ಸುಖವನ್ನೂ ನೀಡುತ್ತದೆ. ಪುಸ್ತಕ ಓದಿ ಕೆಳಗಿಟ್ಟಾಗ ಹಾಗನಿಸಿತು.

***ಉದಯ್ ಕುಮಾರ್ ಇರ್ವತ್ತೂರು***

ಅರೆ ಭಾಷೆಯಲ್ಲಿನ ಆಟಿ ತಿಂಗಳಗೂ ಪುರುಷೋತ್ತಮ ಬಿಳಿಮಲೆಯವರ ಬದುಕಿನ ಪ್ರಮುಖ ಘಟನೆಗಳಿಗೂ ಏನೋ ಒಂದು ರೀತಿಯ ಅನೂಹ್ಯ ಸಂಬಂಧವಿದೆ.

***ವಿಶು ಕುಮಾರ್***

# ವರ್ತಮಾನಕ್ಕೆ ಕನ್ನಡಿಯಾದ 'ಅಕವಿತೆ'

ಕವಿತೆಯ ಸ್ವರೂಪ ಅದರ ಒಳಹೊರಗುಗಳ ಬಗ್ಗೆ ಚರ್ಚೆ ಚಿಂತನೆಗಳು ನಡೆಯುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಕವಯಿತ್ರಿ ಡಾ. ಅಹಲ್ಯಾ ಚಿಂತಾಮಣಿಯವರು 'ಅಕವಿತೆ'ಯ ಮೂಲಕ ಸಂವಹನ ಸಾಧಿಸಲು ಮುಂದಾಗಿದ್ದಾರೆ. ಅನುಭವವನ್ನು ತೀವ್ರತಮವಾಗಿ ಹೇಳುತ್ತಾ ಓದುಗರಿಗೆ ಅದರ ಸಂಭಾವ್ಯತೆಯನ್ನು ಉಂಟು ಮಾಡುವುದೇ ಅವರ ಉದ್ದೇಶವೆಂದು ಅವರ ಕವಿತೆಗಳನ್ನು ಓದಿದಾಗ ಅರಿವಾಗುತ್ತದೆ.


'ಅಕವಿತೆ' ನಲುವತ್ತಾರು ಕವನಗಳ ಸಂಕಲನ. ದೆಹಲಿ ಕರ್ನಾಟಕ ಸಂಘ ಇದನ್ನು ಬೆಳಕಿಗೆ ತಂದಿದೆ. ಮುನ್ನುಡಿಯಲ್ಲಿ ಡಾ। ದೊಡ್ಡ ರಂಗೇಗೌಡರು ಹೇಳುವ ಹಾಗೆ 'ಅಕವಿತೆ'ಯಲ್ಲಿ ಸುಕವಿತೆಯ ನೈಜ ಒರತೆಯೇ ಸಮೃದ್ಧವಾಗಿದೆ. ಅದು ಕೇವಲ ಕಾವ್ಯ ಚಿಲುಮೆಯಷ್ಟೇ ಅಲ್ಲ. ಅದರೊಳಗೆ ಒಂದು ಜೀವಂತ ಭಾವ ಸರಿತವೇ ಹರಿದಿದೆ ಎಂಬುದಂತೂ ಸತ್ಯ.

ಅಹಲ್ಯಾ ಅವರ ಕವಿತೆಗಳು ವಾಸ್ತವ-ಅವಾಸ್ತವ ಎರಡರ ನಡುವಿನ ವೈರುಧ್ಯಗಳು.ಶಬ್ದ-ನಿಶ್ಶಬ್ದಗಳ ಮಧ್ಯದ ಧ್ವನಿಗಳು. ಕಲ್ಪನೆಗಿಂತ ಅನುಭವಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿದಾಗ ಒಳ್ಳೆಯ ಕವನಗಳು ಹುಟ್ಟಲು ಸಾಧ್ಯ ಎಂಬುದನ್ನು ಸಂಕಲನದ 'ಕವಿ ಮತ್ತು ಛಂದೋಗತಿ' ಸ್ಪಷ್ಟ ಪಡಿಸುತ್ತದೆ.

'ಭಾವನೆಗಳ ನೆನಪಿನಲ್ಲಿ' ಕವಯಿತ್ರಿ ಹಳ್ಳಿಯ ಬದುಕನ್ನು ತಿರುಗಿ ನೋಡುತ್ತಾರೆ. ಅಲ್ಲಿ ಸುಖ-ದುಃಖ ತಾಕಲಾಟ-ತೊಳಲಾಟ ಇದೆ.ಸಾಧನೆಯ ಹಾದಿಯಲ್ಲಿ ಸಾರ್ಥಕ ಹೆಜ್ಜೆ ಗುರುತುಗಳನ್ನು ಮೂಡಿಸಿದರೂ ಬದುಕು 'ಕರಗುವ ಕರ್ಪೂರ ಇಂಗುವ ನೀರಿನಂತೆ' ಎಂಬುದು ಅನುಭವಕ್ಕೆ ಬರುತ್ತದೆ. ಪ್ರಕೃತಿಯ ವೈಚಿತ್ರ್ಯದ ನಡುವೆ ಮನುಷ್ಯ ಅತಂತ್ರನಾದರೂ ಬದುಕಿನ ಬಯಕೆಯ ಸೆಲೆ ಆತನಲ್ಲಿ ಬತ್ತುವುದಿಲ್ಲ. 'ಅನಂತ'ದಲ್ಲಿ ಬಯಕೆಯ ಬಳ್ಳಿ ಚಿಗುರುವುದನ್ನು ಕಾಣ ಬಹುದು.

ಪ್ರಕೃತಿ ನಾಶದ ವಿರುದ್ಧ ಕವಯಿತ್ರಿ ಧ್ವನಿಯೆತ್ತುತ್ತಾರೆ. ಗಿಡಮರಗಳನ್ನು ಉಳಿಸಬೇಕೆಂಬ ಸಂದೇಶ 'ಪ್ರಾಣವಾಯು'ವಿನಲ್ಲಿದೆ. ಪ್ರಕೃತಿಯೊಡನೆ ಗೆಳೆತನ ಬೆಳೆಸದಿದ್ದರೆ ಮನುಷ್ಯನಿಗೆ ಅಸ್ತಿತ್ವ ಇಲ್ಲ ಎಂಬ ಧ್ವನಿ 'ಹಸಿರು ಉಸಿರು' ಕವಿತೆಯಲ್ಲಿದೆ. ಉರುಳುತ್ತಿರುವ ತರುಗಳು ಚಿಂತನೆಗೆ ಹಚ್ಚುತ್ತದೆ. "ಒಂದೇ ಎರಡೇ ಸಾವಿರಾರು ಮರಗಳು। ದಿನದಿನವೂ ಉರುಳಿ ಸೊರಗಿದೆ। ನಾಳೆ ನಾವೇ ಆ ಉದ್ದಗಲದ ರಸ್ತೆಯಲ್ಲಿ। ಸಾಲುಸಾಲಾಗಿ ನಿಶ್ಚೇತರಾಗಿ ಬಿದ್ದಿರುತ್ತೇವೆ" ಇದು ಒಂದು ಎಚ್ಚರಿಕೆಯೂ ಹೌದು.

ಪ್ರಕೃತಿಯ ಮುಂದೆ ನಾವು ಕುಬ್ಜರು ಎಂಬ ಅರಿವು ಮೂಡಿಸುವ 'ಕುಬ್ಜ' ಶಬ್ದವಿಲ್ಲದ ಕೂಗು ಶೇಷ ಪ್ರಶ್ನೆಯಾಗುವ 'ಶೇಷ ಪ್ರಶ್ನೆ' ಸಕಲ ಸಂಕಷ್ಟಗಳನ್ನು ಮೆಟ್ಟಿ ನಡಿಗೆಯಿಂದಲೇ ರಸ್ತೆಯ ಬಗ್ಗೆ ಹೇಳುವ 'ಈ ಹಾದಿ', ಬಾಳಿನ ಹಾದಿಗೆ ಸಕಾರಣವಾಗುವ 'ಪಯಣ', ಅರಿವಿನ ಪರಿಧಿಯಲ್ಲಿ ಬದುಕಿನ ಮೂಲ ಸೆಲೆಯನ್ನು ಅಭಿವ್ಯಕ್ತಿಸುವ 'ಅರಿವು' ಮತ್ತೆ ಮತ್ತೆ ಓದಿಸಿಕೊಳ್ಳುತ್ತದೆ. ಬೆಳೆದ ಬೆಳೆಗೆ ಆದಾಯ ಸಿಗದೆ, ಪಡೆದ ಸಾಲವನ್ನು ಮರುಪಾವತಿಸಲಾಗದೆ ರೈತರು ಆತ್ಮಹತ್ಯೆ ಮಾಡುತ್ತಿರುವ ಈ ಸಂದರ್ಭದಲ್ಲಿ ಅಹಲ್ಯಾ ಅವರ 'ಓ ನನ್ನ ರೈತ' ಅನುಕಂಪದ ಅಲೆಯಾಗಿ ಮೂಡಿಬಂದಿದೆ.' ಬದುಕಿನ ಪಂಕ್ತಿಗಳು' ವರ್ತಮಾನವನ್ನು ಧ್ವನಿಸುತ್ತದೆ. ಸಮಾಜ ವ್ಯವಸ್ಥೆಯನ್ನು ಅಣಕಿಸುತ್ತಾ ವ್ಯಂಗ್ಯದ ನಡಿಗೆಯಲ್ಲಿ ವೈಚಾರಿಕ ನೆಲೆಯನ್ನು ಕ್ರಮಿಸುತ್ತದೆ ಕೆಲವರು ಬದುಕಿದ್ದರೂ ಸತ್ತಂತವರ ಹಾಗಿರುತ್ತಾರೆ. ಇನ್ನು ಕೆಲವರು ಸತ್ತಿದ್ದರೂ ಅವರ ಕೃತಿಗಳ ಮೂಲಕ ಬದುಕುತ್ತಾರೆ. ಈ ಎರಡು




**ಪ್ರಕಾಶಕರು : ದೆಹಲಿ ಕರ್ನಾಟಕ ಸಂಘ**
**ವರ್ಷ : 2017. ಬೆಲೆ : ರೂ. 100/-**

ರೀತಿಯ ವೈರುಧ್ಯ 'ಆತ್ಮಹತ್ಯೆ'ಯಲ್ಲಿದೆ. 'ಸತ್ಯಕ್ಕೆ ಶ್ರದ್ಧಾಂಜಲಿ' ಕವಿತೆಯಲ್ಲಿ ಸತ್ಯ ಮಾರ್ಗದಲ್ಲಿ ನಡೆದವರ ಸಂಕಷ್ಟವಿದೆ. ಲೇಖಕರೇ, ಕವಿಗಳೇ, ಸಮಾಜ ಸುಧಾರಕರೇ. ನೀವೇನಾದರೂ ಸತ್ಯ ಹೇಳಿದರೆ ಸೆರೆಮನೆಯ ಕಂಬಿಗಳ ಹಿಂದೆ ಸರಿದು ಹೋಗುವಿರಿ ಎಂಬ ಎಚ್ಚರಿಕೆಯಿದೆ.

ಅಹಲ್ಯಾ ಅವರ 'ಕನಸು' ವಯಸ್ಸಿನ ಅಂತರವನ್ನು ಮೀರಿದ ಅನುಭವ ಜನ್ಯ ಪ್ರತಿಮೆಗಳ ಸಂಕೇತ. ಶಿಶುವಿನಿಂದಲೇ ಆರಂಭವಾದ ಕನಸು ಹದಿಹರೆಯದಲ್ಲಿ ನನಸಾಗಿ ಮತ್ತೆ ವೃದ್ಧಾಪ್ಯದಲ್ಲಿ ಪುಣ್ಯದ ಫಲ ವಾಗುತ್ತದೆ. ಈಸಬೇಕು ಇದ್ದು ಜಯಿಸಬೇಕು ಎಂಬ ಛಲದೊಂದಿಗೆ ಎದೆಯಾಳದ ಭಾವನೆಗಳ ಉದ್ವೇಗದ ಸುಳಿಗೆ ಸಿಲುಕಿದ ಮನಸ್ಸು 'ಸುಳಿಗಳ ಸೆಲೆ'ಯಲ್ಲಿ ನಲುಗಿದೆ.

ಸಮಸ್ಯೆಗಳ ತಡಕಾಟ, ನಾಳಿನ ಚಿಂತೆಗಳ ತೊಳಲಾಟ, ಕನಸು ನನಸಾಗಿಸುವ ಪರದಾಟ, ನೂಕಾಟ, ಪರದಾಟ, ಹೋರಾಟ, ಹೀಗೆ ಬದುಕಿನ ವಿವಿಧ ಮುಖಗಳ ನೋಟವನ್ನು ಬೀರುವ 'ಯುಗಯುಗದ ಆಟ' ಉತ್ತಮ ಕವನ. 'ವರ್ಷದ ಕೊನೆಯ ದಿವಸ'ದ ವಿವಿಧ ಚರ್ಯೆಗಳು ಕೂಡ ಸಶಕ್ತ ಪದಬಂಧಗಳಲ್ಲಿ ದಾಖಲಾಗಿದೆ. ಪರಿಸರವನ್ನು ಉಳಿಸಿದರೆ ಸಾಫಲ್ಯದ ಪುರಸ್ಕಾರ ಲಭಿಸುವುದೆಂಬ ಸಂದೇಶ 'ಪ್ರಚಲಿತ ಪರಿಸರ'ದಲ್ಲಿದೆ. 'ಪುಸ್ತಕ ಓದು' ಕವಯಿತ್ರಿಯ ಸ್ವಗತ ಸಂವಾದದಂತಿದೆ, ಆತ್ಮಕಥನದ ಒಂದು ಭಾಗವಾಗಿಯೂ ಕಾಣಿಸಿಕೊಳ್ಳುತ್ತದೆ. "ಅಬಲೆಯೆಂದು ಕೊರಗಬೇಡ। ಸಬಲೆ ಎಂದು ಮರೆಯಬೇಡ" ಎಂದು ಸ್ನೇಹಿತೆಗೆ ಕಿವಿಮಾತು ಹೇಳುವ 'ವಿಸ್ಮಯ' ಮನ ಮಟ್ಟುತ್ತದೆ.

ವಿಜ್ಞಾನದ ಒರೆಗಲ್ಲಿಗೆ ಹಚ್ಚಿ ಶಬ್ದ ಶಿಲ್ಪ ವಾಗಿ ಮೂಡಿಬಂದ 'ಕಾಲ', ಕುಬ್ಜ-ಮಹಾಕಾಯ', 'ಯುಗಾಂತರ' ವಿಮರ್ಶಾತ್ಮಕವಾಗಿದೆ. 'ಅಮ್ಮನ ಅಕ್ಷರ ಮಾಲೆ' ವಿನೂತನ ಪ್ರಯೋಗ. ಅಮ್ಮನ ಅದಮ್ಯ ಚೇತನ ಕ್ಕೆ ಪೊಡಮಡುವ ಕವಯಿತ್ರಿ ಇತರರಿಗೆ ಮಾದರಿಯಾಗಿದ್ದಾರೆ. ಅದೇ ರೀತಿಯ ಅಕ್ಷರಮಾಲೆಯ ಇನ್ನೊಂದು ಕವನ 'ನಿನ್ನ ಅಕ್ಷರ ಮಾಲೆಗೆ ಅಮ್ಮನ ಉತ್ತರ' ಸಂತೋಷ, ಸಮಾಧಾನ ತರುವಂಥದ್ದು. ಗುರು ಹಾಮಾನಾ ಅವರಿಗೆ ನುಡಿನಮನ ಸಲ್ಲಿಸಿದ ಕವನವೂ ಅತ್ಯುತ್ತಮವಾಗಿದೆ. ಹೆಣ್ಣಿನ ಒಳನೋವು, ತೊಳಲಾಟ, ಸೌಮ್ಯ ಪ್ರತಿಭಟನೆ 'ಭ್ರೂಣಹತ್ಯೆ'ಯಲ್ಲಿ ವ್ಯಕ್ತವಾಗುತ್ತದೆ. 'ಮೋಜು', 'ಆಸೆಯ ಫಲ', 'ಸತ್ಯ-ಮಿಥ್ಯ' ಆಲೋಚನೆಗೆ ಹಚ್ಚುತ್ತದೆ.

ಅಹಲ್ಯಾ ಅವರು ಸುದೀರ್ಘ ಕಾಲ ದೆಹಲಿ ವಿಶ್ವವಿದ್ಯಾಲಯದಲ್ಲಿ ಸಸ್ಯಶಾಸ್ತ್ರವನ್ನು ಬೋಧಿಸಿ ನಿವೃತ್ತರಾದವರು.ಅವರ ಸಂಶೋಧನಾ ವಿಷಯ 'ಪಾಚಿ' ಇಲ್ಲಿ ಕವನವಾಗಿಯೂ ಸಾರ್ಥಕ್ಯ ಪಡೆದಿದೆ.

2008ರಲ್ಲಿ 'ದೆಹಲಿ ಕನ್ನಡಿಗ' ಪತ್ರಿಕೆಯ ಆಶ್ರಯದಲ್ಲಿ ಬಾ ಸಾಮಗರ ನೇತೃತ್ವದಲ್ಲಿ ದೆಹಲಿಯಲ್ಲಿ ನಡೆದ 25ನೇ ಅಖಿಲ ಭಾರತ ಕನ್ನಡ ಸಮ್ಮೇಳನದ ಉದ್ಘಾಟನೆಗೆ ನಾನು ದೆಹಲಿಗೆ ಹೋಗಿದ್ದೆ. ಕವಿಗೋಷ್ಠಿಯಲ್ಲಿ ಅಹಲ್ಯಾ ಕೂಡಾ ಭಾಗವಹಿಸಿದ್ದರು. ಇತ್ತೀಚೆಗೆ ದೆಹಲಿಗೆ ಹೋಗಿದ್ದಾಗ ಅವರನ್ನು ಮತ್ತೆ ಭೇಟಿಯಾಗುವ ಅವಕಾಶ ಲಭಿಸಿತು. 'ಅಕವಿತೆ' ಸಂಕಲನವನ್ನು ಕೈಗಿತ್ತರು. ಓದಿ ಖುಷಿಪಟ್ಟಿದ್ದೆ. ಈಗ ಮತ್ತೊಮ್ಮೆ ಓದಿ ಅನಿಸಿಕೆಗಳನ್ನು ಬರಹಕ್ಕಿಳಿಸಿದ್ದೇನೆ. ಡಾ. ಅಹಲ್ಯಾ ಚಿಂತಾಮಣಿ ಅವರ ಸಂವೇದನಾಶೀಲತೆಗೆ, ವೈಚಾರಿಕತೆಗೆ, ಸೃಜನಶೀಲತೆಗೆ, ಸಮಾಜಮುಖಿ ನಿಲುವಿಗೆ ಹಿಡಿದ ಕನ್ನಡಿ 'ಅಕವಿತೆ'.

***ರಾಧಾಕೃಷ್ಣ ಕೆ ಉಳಿಯತ್ತಡ್ಕ***

# ದೇಬೂ ಮತ್ತು ಶಿಬಿ

ಶಿಬಿ ಮದುವೆಯಾಗಿ ಈ ಮನೆಗೆ ಬಂದಾಗ ಮನೆಯಲ್ಲಿನ ಎಲ್ಲರಿಗೂ ಸಂಭ್ರಮವಿತ್ತು. ಶಿಬಿಯ ಅಪ್ಪ ಕ್ರಿಶನಾ ಬರುವಾ ಪಕ್ಕದ ಊರಿನ ದರೋಗಾ ಆಗಿದ್ದನಾದ್ದರಿಂದ ಈ ಥೆಂಪೂ ಹಳ್ಳಿಯಲ್ಲಿನವರಿಗೆಲ್ಲ ಒಂದು ವಿಶೇಷ ತೆರನ ಭಯಭಕ್ತಿಗಳಿದ್ದವು. ಬಾಬೊಯ್ ಸಾಹೂನ ಮನೆಯ ಸೊಸೆಯಾಗಿ ಬರುವುದೆಂದರೇನು ಅಚ್ಚರಿಯ ಮಾತಲ್ಲ. ಕಿಶನಾ ಬರುವಾ ದರೋಗಾ ಆದರೇನಂತೆ ಅವನಿಗೆ ಇರಲು ಮನೆಯೊಂದು ಬಿಟ್ಟು ಬೇರೇನೂ ಆಸ್ತಿಪಾಸ್ತಿಗಳಿದ್ದಿಲ್ಲ. ತನ್ನ ಸರಕಾರಿ ನೋಕರಿಯ ರೋಬಿನಲ್ಲಿಯೇ ಅವನು ಸುತ್ತಲಿನ ನಾಲ್ಕು ಹಳ್ಳಿಗಳಲ್ಲಿ ಗತ್ತಿನಲ್ಲಿ ತಿರುಗುತ್ತಿದ್ದನೆಂಬುದನ್ನು ಬಿಟ್ಟರೆ ಹೇಳಿಕೊಳ್ಳುವಂಥ ಯಾವ ಸಂಗತಿಯೂ ಶಿಬಿ ಬರುವಾ ಕುಟುಂಬದಲ್ಲಿದ್ದಿಲ್ಲ.

ಶಿಬಿಯೂ ಅಷ್ಟೇ ಬತ್ತದ ಗದ್ದೆಗಳನ್ನು ದಾಟಿ. ಮೀನುಗಳಿರುವ ಸಣ್ಣ ಸಣ್ಣ ಕೆರೆಗಳನ್ನು ದಾಟಿ ಸ್ಕೂಲಿಗೆ ಹೋಗುವ ಕಾಲದಿಂದಲೂ ದೀಪೂ ಸಾಹೂನನ್ನು ಕದ್ದು ಕದ್ದು ನೋಡುತ್ತಿದ್ದಳು. ದೀಪೂ ಅಪ್ಪನಂತೆ ಕಪ್ಪು ಬಣ್ಣದವನಾಗಿರದೇ ಅಮ್ಮನಂತೆ ಗೌರವರ್ಣದ ಚೆಲುವನಾಗಿದ್ದ.ಅವನಿಗೂ ಒಬ್ಬ ಅಕ್ಕ ಒಬ್ಬಳು ತಂಗಿ ಮತ್ತೊಬ್ಬ ತಮ್ಮನಿದ್ದ. ಹಿರಿಯಕ್ಕ ಮೋಮೋಲ್ ಮದುವೆಯಾಗಿ ದಿಲ್ಲಿಗೆ ಹೋಗಿದ್ದಳು ಅಲ್ಲಿ ಹೆಚ್ಚಿನ ದುಡಿತವಿದೆ. ದುಡ್ಡು ಕಾಸೂ ಕೈಯಲಿಟ್ಟುಕೊಂಡು ಬರಬಹುದು ಎಂಬ ಆಸೆಯಿಟ್ಟುಕೊಂಡು.

ದೀಪೂನ ತಂಗಿ ಕಲ್ಪನಾ ಕಪ್ಪಗೆ ಕುಳ್ಳಗಿನ ಚುರುಕಿನ ಹುಡುಗಿ. ತಮ್ಮ ಬಿರಜೂ ಇನ್ನೂ ಚಿಕ್ಕವ. ಆಟಕ್ಕುಂಟು ಲೆಕ್ಕಕ್ಕಿಲ್ಲ. ಸಾಲೆಗೆ ಹಾಕಿದರೂ ಸರಿಯಾಗಿ ಹೋಗದೇ ಆಟವಾಡಿಕೊಂಡಿರುತ್ತಿದ್ದ. ಥೆಂಪೂ ಹಳ್ಳಿಯ ಬಹುತೇಕ ಕೃಷಿಕ ಹೈದರೆಲ್ಲ ಮದುವೆ ಮಾಡಿಕೊಂಡು ಹೆಂಡತಿಯೊಡನೆ ದಿಲ್ಲಿ ಸೇರಿ ಅವರ ಮುದುಕ ಅಪ್ಪ ಅಮ್ಮಂದಿರು ಹೊಲ ಗದ್ದೆಗಳಲ್ಲಿ ಮೈಯನ್ನು ಕಬ್ಬಿಣದಂತೆ ಕಾಯಿಸುತ್ತ, ತಮ್ಮ ತಮ್ಮ ಮಾವು, ಹಲಸು, ಸೀಬೆ ಹಣ್ಣಿನ ತೋಟಗಳನ್ನು ಸಂಬಾಳಿಸುತ್ತ ಗಂಜಿಯೂಟವನ್ನು ಉಣ್ಣುತ್ತ ಜೀವನ ಸಾಗಿಸುತ್ತಿದ್ದರು.

ಶಿಬಿಯೂ ಸಹ ಒಂದಿನ ಥೆಂಪೂ ಹಳ್ಳಿಯನ್ನು ತೊರೆದು ಗಂಡನೊಟ್ಟಿಗೆ ರೈಲು ಹತ್ತಿದಾಗ ಇದ್ದ ಹುರುಪು ಅದು ಮೆಲ್ಲಗೆ ತೆವಳಿಕೊಂಡು ಸ್ಟೇಷನ್ ದಾಟುತ್ತಲೇ–'ಡ್ಡಗ್ಗಂ ಡಕ್ಕಂ...ಡಡಕು ಬಡಕು' ಎಂದು ಸದ್ದು ಮಾಡುತ್ತ ಓಡತೊಡಗಿದಾಗಲೇ ಅವಳಿಗೆ ರೈಲಿನ ಹಿಂದೆ ಹಿಂದೆ ಸರಿದು ಮಾಯವಾದ ತನ್ನ ಹಳ್ಳಿಯ ಹೊಲ ಗದ್ದೆಗಳು... ಮೊಣಕಾಲ ಮಟ್ಟಸಕ್ಕೆ ಕೆರೆಯಲ್ಲಿ ನಿಂತು ಹಿಡಿಯುತ್ತಿದ್ದ ಮೀನುಗಳ ನುಣುಪು ಮೈಯ ನೆನಪಾಗಿ ದುಃಖ ಒತ್ತರಿಸಿಕೊಂಡು ಬಂತು.

ಬಿಸಿಲಿನ ಧಗೆಯಲ್ಲಿ ಬೆವರಿಳಿಯುತ್ತಿದ್ದರೂ ರೈಲಿನ ತೂಗಾಟದಲ್ಲಿ ನಿದ್ದೆ ಹೋದ ಗಂಡನ ಮುಖವನ್ನೊಮ್ಮೆ ನೋಡಿ ಮತ್ತೆ ಸೆರಗಿನಲ್ಲಿ ಮುಖ ಮುಚ್ಚಿಕೊಂಡಳು. ಇಷ್ಟಕ್ಕೂ ತಾವು ಊರುಬಿಟ್ಟು ಹೋಗುತ್ತಿರುವುದು ದುಡಿಮೆಗಾಗಿಯೋ ಇಲ್ಲ ಸೀಬೆ ಮರದ ನೆರಳಿನಲ್ಲಿ ದೇಬೂನೊಡನೆ ಮಾತನಾಡಿದ್ದು ತನ್ನ ದರೋಗಾ ಅಪ್ಪನ ಕಿವಿ ತಲುಪಿದ್ದಕ್ಕೋ ಎಂದು ಅರಿಯದೇ ಶಿಬಿ ಒಳಗೊಳಗೇ ದುಃಖಿಸುತ್ತಿದ್ದಳು. ಬೊಬಾಯ್ ಸಾಹೂ ಸೊಸೆಯನ್ನು ಮಗಳಂತೆಯೇ ನೋಡಿಕೊಳ್ಳುತ್ತಿದ್ದ. ಆದರೆ ಅತ್ತೆಗೆ ಶಿಬಿಯ ವೈಯ್ಯಾರ ಬಿನ್ನಾಣಗಳನ್ನು ಕಂಡು ಸಿಟ್ಟು ಭುಗಿಲೇಳುತ್ತಿತ್ತು. ಆದರೂ ಶಿಬಿ ಗದ್ದೆಗಿಳಿದು ಕೆಲಸಮಾಡುವುದರಿಂದ ಹಿಡಿದು ಹಸುವಿನ ಹಾಲು ಕರೆದು ಮೇವುಣ್ಣಿಸುವುದರ ವರೆಗೂ ಅತ್ತೆಗೆ ಸಮನಾಗಿ ದುಡಿಯುತ್ತಿದ್ದರಿಂದ ಆಕೆಗೆ ಬೈಯ್ಯುವ ಹಳಿಯುವ ಅವಕಾಶವೇ ಸಿಕ್ಕಿದ್ದಿಲ್ಲ.

ದೇಬೂಗಾದರೂ ಬುದ್ಧಿ ಬೇಡವೆ? ಥೇಂಪೂ ಕಾಳಿಬಾರಿಯ ಜಾತ್ರೆಗೆ ಗೆಳೆಯರೊಟ್ಟಿಗೆ ಬಂದವ ಬಾಬೊಯ್ ಸಾಹೂರ ಮನೆ ಹುಡುಕಿಕೊಂಡು ಬಂದೇಬಿಟ್ಟ. ಶಿಬಿಗೆ ತವರೂರಿನಿಂದ ಬಂದ ಬಾಲ್ಯದ ಗೆಳೆಯನ ಆಗಮನ ಹೆಜ್ಜೆಗೆ ಗೆಜ್ಜೆ ಕಟ್ಟಿಕೊಂಡು ಕುಣಿಸಿತು. ದರೋಗಾ ಅಪ್ಪ ಅವಳಿಗೆ ಉಡುಗೊರೆಯಾಗಿ ಕೊಟ್ಟ ಗೌರಿ ಹಸುವನ್ನು



ತುಸು ದೂರದ ವರೆಗೂ ಮೇಯಿಸಲು ತಾನೇ ಕರೆದೊಯ್ದಳು. ದೇಬೂನು ಜೊತೆ ಜೊತೆಗೆ ಊರಿನ ಕಥೆ ಹೇಳುತ್ತ ಸಾಗಿದ್ದ. ಕೆರೆಯಲ್ಲಿ ಗೌರಿಯನ್ನು ಮೀಯಿಸಿ ಮೇಯಲು ಬಿಟ್ಟು ತುಸು ಹೊತ್ತು ಸೀಬೆ ಮರದ ನೆರಳಿಗೆ ಕಾಲು ಚಾಚಿ ಕೂತಿದ್ದನ್ನು ಯಾರೋ ಆಗಲೇ ಶಿಬಿಯ ಅತ್ತೆಗೆ ತಲುಪಿಸಿದ್ದರು.

ಅವತ್ತಿನಿಂದಲೇ ಶಿಬಿಯ ದುರ್ದೆಸೆ ಪ್ರಾರಂಬವಾಗಿತ್ತು. ದಿನನಿತ್ಯದ ಜಗಳ ಅಳು ರೋಧನದ ಕುರುಕ್ಷೇತ್ರ ನೋಡಲಾರದೇ ಬಾಬೊಯ್ ಸಾಹೂ ಮಗ ಸೊಸೆಯನ್ನು ಬೇರೆಲ್ಲಾದರೂ ದುಡಿದು ಬಾಳಿರಿ ಈ ಮನೆಯಲ್ಲಿರಕೂಡದು ಎಂದು ಫರ್ಮಾನ್ ಹೊರಡಿಸಿಯೇ ಬಿಟ್ಟರು.

ಶಿಬಿ ನಾಲ್ಕೈದು ಮನೆಗಳಲ್ಲಿ ಕಸಗುಡಿಸಿ, ನೆಲವರೆಸಿ, ಪಾತ್ರೆ ತೊಳೆಯುವ ಕೆಲಸವನ್ನು ಬಹಳ ಅಕ್ಕರಾಸ್ಥೆಯಿಂದ ಮಾಡುತ್ತಿದ್ದಾಳೆ. ಗಂಡ ದೀಪೂವಿಗೂ ಸೊಸೈಟಿಯ ಕಸ ಗುಡಿಸುವ ಕೆಲಸವನ್ನು ಅವನ ಗೆಳೆಯನೊಬ್ಬ

> “ಸೀಬೆ ಮರದ ಸಂಗತಿ ಅವನಿಗೆ ಇದ್ದಕ್ಕಿದ್ದಂತೆ ನೆನಪಾಗಿಬಿಟ್ಟಿತು. ಎದ್ದರೆ ಕೂತರೆ ಶಿಬಿಯನ್ನು ಚುಚ್ಚು ಮಾತುಗಳಿಂದ ಚುಚ್ಚಿ ನರಳಿಸತೊಡಗಿದ್ದ. ದೇಬೂವನ್ನು ಅವಳ ಪ್ರಿಯತಮನೆಂದೂ ಅವನೊಡನೆ ಏನೆಲ್ಲ ರಾಸಲೀಲೆ ನಡೆಸಿದವಳೆಂದೂ ಈ ಪರ ಊರಿನ ಈ ಗಂಡಸರೆದುರೂ ಕುಡಿದ ನಶೆಯಲ್ಲಿ ಬೊಗಳತೊಡಗಿದ.”

ಹಚ್ಚಿಕೊಟ್ಟಿದ್ದಾನೆ. ಇಬ್ಬರೂ ಬೆಳಗೆಯೇ ಎದ್ದು ಕೆಲಸಕ್ಕೆ ಹೊರಡುತ್ತಾರೆ. ಗಂಡನಿಗಿಂತ ಶಿಬಿ ಮೊದಲೇ ಮನೆಬಿಡುತ್ತಾಳೆ. ಥೇಂಪೂ ಹಳ್ಳಿಯಲ್ಲಿ ಹುಟ್ಟುತ್ತಿದ್ದ ಕೆಂಪು ಕೆಂಪು ಕುಂಕುಮದಂತೆ ಹೊಳೆಯುತ್ತಿದ್ದ ಸೂರ್ಯ ಈ ಊರಲ್ಲಿ ಉರಿಯುವ ಬೆಂಕಿಯ ಗೋಲದಂತೆ ಕೆಂಗಣ್ಣುಬಿಟ್ಟುಕೊಂಡೇ ಹುಟ್ಟಿರುತ್ತಾನೆ. ಸ್ವಚ್ಛ ಗಾಳಿಯ ಬದಲು ಕೊಳೆತ ಹೆಗ್ಗಣದಂತ ವಾಸನೆಯ ಗಾಳಿ ವಾಕರಿಕೆ ತರಿಸುತ್ತದೆ. ನಾಲ್ಕು ಮಜಲಿನ ಒಂದೊಂದೇ ಕೋಣೆಯ ಮನೆಗಳ ಎಲ್ಲ ಬಚ್ಚಲಿನ ಪೈಪುಗಳು ಹೊರಗೋಡೆಯ ಹೊರಭಾಗದಲ್ಲಿದ್ದು ಕೆಲವು ಪೈಪುಗಳೇ ಒಡೆದುಹೋಗಿ ಜಲಪಾತದಂತೆ ಗಲೀಜು ನೀರು ನೆಲಕ್ಕೆ ಅಪ್ಪಳಿಸುತ್ತಿರುತ್ತದೆ. ತಮಗೆ ಇದರಿಂದ ಮುಕ್ತಿಯೇ ಇಲ್ಲವೆನ್ನುವಂತೆ ಹೊಟ್ಟೆಬಿರಿದುಕೊಂಡ ನಾಲಾಗಳಿಂದ ಹರಿಯುವ ಗಲೀಜು ನೀರಿನ ಮೇಲೆ ಒಂದಿಷ್ಟು ಪ್ಲಾಸ್ಟಿಕ್ ಕಸ, ಊರಿನ ಇನ್ನೆಲ್ಲ ಹೊಲಸು ಅದರಲ್ಲಿ ಬಿದ್ದು ಬಿದ್ದು ಇಷ್ಟೆತ್ತರ ಬೆಳೆದು ಅದು ನಾಲಾ ಇತ್ತೆ ಇಲ್ಲ ತಿಪ್ಪೆಯ ರಾಶಿಯೇ ಆಗಿತ್ತೋ ಎಂದು ಕೂಡ ಗೊತ್ತಾಗದ ರೀತಿಯಲ್ಲಿ ದುರ್ಗಂಧದ ಬೆಟ್ಟವಾಗಿತ್ತೀಗ, ಇದನ್ನೆಲ್ಲ ನೋಡಿಕೊಂಡು ನಾಲ್ಕಾರು ಮನೆಗಳಲ್ಲಿ ಭಾಷೆ ಬಾರದ ಅವಳಿಂದ ತಪ್ಪುಗಳಾಗುತ್ತಲೂ ಅವರಿಂದ ಬೈಸಿಕೊಳ್ಳುತ್ತಲೂ ಶಿಬಿ ಬದುಕಬೇಕಾದ ಸ್ಥಿತಿ ಅವಳು ದಿನ ದಿನವೂ ಥೇಂಪೂ ಹಳ್ಳಿಯನ್ನು ನೆನೆಯುವಂತೆ ಮಾಡುತ್ತಿತ್ತು. ಹಾಗೆ ನೆನೆದಾಗಲೆಲ್ಲ ಮೊದಲು ಕಣ್ಣಿಗೆ ಕಟ್ಟುತ್ತಿದ್ದುದು ಅದೇ ಘಟನೆ. ಕೆರೆಯಲ್ಲಿ ಗೌರಿಯನ್ನು ಮೀಯಿಸುತ್ತಿದ್ದ ದೇಬೂ ಮತ್ತು ತಾನು. ಸೀಬೆ ಮರದ ನೆರಳಿನಲ್ಲಿ ಹರಟುತ್ತ ಬಾಲ್ಯವನ್ನು ಮೆಲುಕುಹಾಕಿದ ತಾನು ಮತ್ತು ದೇಬೂ.

ಶಿಬಿಗೆ ಅವಳ ದರೋಗಾ ಅಪ್ಪ ದೇಬೂವನ್ನು ಚರ್ಮ ಸುಲಿಯುವ ಹಾಗೆ ಹೊಡೆದ ಸಂಗತಿ ಮಾತ್ರ ಗೊತ್ತೇ ಇಲ್ಲ.

ಶಿಬಿಯ ಗಂಡ ದೀಪಕನಿಗೂ ಈಗ ಹತ್ತಾರು ಗೆಳೆಯರು, ಥೇಂಪೂ ಹಳ್ಳಿಯ ದನಕರುಗಳನ್ನು, ಮಾವು ಹಲಸಿನ ಮರಗಳಿಗೆ ಬೆರಳಗಲದ ಹಗ್ಗ ಕಟ್ಟಿ ಊರಿನ ಹೆಣ್ಣುಮಕ್ಕಳಿಗೆ ಆಡಲು ಜೋಕಾಲಿ ಕಟ್ಟಿಕೊಡುತ್ತಿದ್ದ ಬಾಬೊಯ್ ಸಾಹೂನ ಮಗನನೀಗ ಇಸ್ಪೀಟೂ ಆಟವನ್ನೂ ಕಲಿತಿದ್ದಾನೆ. ಆಗಾಗ ಈ ದೋಸ್ತರುಗಳು ಭಾರಿ

ಗಮ್ಮತ್ತಾಗಿರುವ ಹೆಂಡವನ್ನೂ ಕುಡಿಯಲು ಕಲಿಸಿದ್ದಾರೆ. ಅದನ್ನು ಕುಡಿದಾಗಲೆಲ್ಲ ದೀಪೂವಿಗೆ ಆಕಾಶದಲ್ಲಿ ಜೋಕಾಲಿ ತೂಗಿದ ಅನುಭವ. ನಗರದ ದೊಡ್ಡ ದೊಡ್ಡ ಬಿಲ್ಡಿಂಗಿನ ಮೇಲೆ ಆಕಾಶಾಮಾರ್ಗವಾಗಿ ಹಾರುತ್ತ ಹಾರುತ್ತ ಥೇಂಪೂವನ್ನು ತಲುಪುವ ಹಾಗಿದ್ದರೆ ತನ್ನ ಹಳ್ಳಿಯ ಇನ್ನಿತರ ಗೆಳೆಯರನ್ನೂ ಇಲ್ಲಿಗೆ ಕರೆತಂದುಬಿಡುವನೇ ಅವ.

ಶಿಬಿಯ ಸಂಬಳ ದೀಪೂವಿನ ಸಂಬಳ ಸೇರಿ ತನ್ನ ಕೈತುಂಬ ಹಣವನ್ನು ನೋಡುವಾಗೆಲ್ಲ ಶಿಬಿಗೆ ಥೇಂಪೂವಿನಲ್ಲಿ ಹರಕು ಸೀರೆಗೆ ತೇಪೆಹಾಕಿ ಉಡುತ್ತ ಗದ್ದೆಗಳಲ್ಲಿ ಕಳೆಕೀಳುವ ತಾಯಿ ನೆನೆಪಾಗುತ್ತಿದ್ದಳು. ಇಲ್ಲಿ ಮಾವಿನ ಹಣ್ಣಿಗೆ ದುಡ್ಡುಕೊಟ್ಟು ಕಿಲೋ ಲೆಕ್ಕದಲ್ಲಿ ಖರೀದಿಸಬೇಕಾದಾಗೆಲ್ಲ ತನ್ನ ಊರಿನ ತೋಟದ ಹಣ್ಣುಗಳು ನೆನಪಾಗುತ್ತಿದ್ದವು. ಘಮಘಮಿಸುವ ಪರಿಮಳದ ಹಲಸನ್ನಂತೂ ಅವಳಿಗೆ ನೋಡಲೂ ಕೂಡ ಎಲ್ಲಿಯೂ ಸಿಗಲಿಲ್ಲ. ಎಲ್ಲ ಹಸಿ ಹಲಸನ್ನು ಪಲ್ಯಕ್ಕೆಂದು ಮಾರುತ್ತಿದ್ದುದನ್ನೇ ನೋಡಿದಳು. ಇಡೀದಿನ ಧಗಧಗಿಸುವ ಬಿಸಿಲು ಮತ್ತು ಒಡಲುರಿ ಅಷ್ಟೇ.

ಅವಳು ಕೆಲಸ ಮಾಡುತ್ತಿದ್ದ ಮೇಡಮ್ಮುಗಳಿಗೆ ತನ್ನ ತೋಟದ ಬಗೆ ಹೇಳಿದಾಗ ಅವರೆಲ್ಲ ಇವಳು ಸುಳ್ಳು ಸುಳ್ಳು ರೈಲು ಬಿಡುತ್ತಿದ್ದಾಳೆಂದೇ ಅಪಹಾಸ್ಯ ಮಾಡಿದರು. "ಅಷ್ಟೆಲ್ಲ ಸಂಪತ್ತನ್ನು ಬಿಟ್ಟು ಇಲ್ಲಿ ಮನೆಗಳಲ್ಲಿ ಕಸ ಮುಸುರೆ ಮಾಡುವುದಾದರೂ ಯಾಕೆ? ನಿನ್ನ ಹಳ್ಳಿಗೇ ಯಾಕೆ ಹೋಗಬಾರದು ಶಿಬಿ" ಎನ್ನುತ್ತಿದ್ದವರೇ ಹೆಚ್ಚು.

ಅವಳಿಗೆ ಈಗಲೇ ಹಾರಿಹೋಗಿ ಬಿಡಬೇಕೆನ್ನುವ ತವಕ. ಆದರೆ ಹೇಗೆ ಹೋಗೋದು?

ಇಷ್ಟು ದಿನ ಸರಿಯಾಗಿ ಹೆಂಡತಿಯ ಕೈಯಲ್ಲಿ ಸಂಬಳ ಕೊಡುತ್ತಿದ್ದ ದೀಪುವಿಗೆ ಈಗ ದುಡ್ಡೆ ಕೈಯಲ್ಲಿ ನಿಲ್ಲುತ್ತಿಲ್ಲ. ಒಂದಿನ ಅತ್ತು ಕರೆದು ಶಿಬಿ ತನ್ನ ಮಾವನಿಗೆ ಫೋನಿನಲ್ಲಿ ಗಂಡನ ಗುಣಗಾನವನ್ನೆಲ್ಲ ಹೇಳಬಿಟ್ಟಳು. ಬಾಬೋಯ್ ಸಾಹೂ ಫೋನು ತಗೊಂಡು ತಮ್ಮ ಪುತ್ರರತ್ನನಿಗೆ ಚೆನ್ನಾಗಿ ಬೈದು–'ಹೀಗೆಲ್ಲ ಅಡ್ಡದಾರಿ ಹಿಡಿದರೆ ನಿನಗೆ ಆಸ್ತಿಯಲ್ಲಿ ನಾಕಾಣೆಯೂ ದಕ್ಕುವುದಿಲ್ಲ. ಎಲ್ಲವನ್ನೂ ಶಿಬಿಗೇ ಬರೆದುಬಿಡುತ್ತೇನೆಂದು' ಗುಡುಗಿದರು.

ದೀಪೂವಿನ ಮೈಯ ರಕ್ತ ಕತ ಕತ ಕುದಿಯಿತು. ಶಿಬಿಯ ಕತ್ತು ಹಿಸುಕುವಷ್ಟು ಸಿಟ್ಟು ಅವನಿಗೆ. ಅವಳ ಕೂದಲು ಕೊಂಕಿದರೂ ನಿನ್ನನ್ನು ಸೀಳಹಾಕುತ್ತೇನೆ ಎಂದು ಗದರಿಸಿದ್ದರು ಬಾಬೋಯ್ ಸಾಹೂಗಳು.

ಸೀಬೆ ಮರದ ಸಂಗತಿ ಅವನಿಗೆ ಇದ್ದಕ್ಕಿದ್ದಂತೆ ನೆನಪಾಗಿಬಿಟ್ಟಿತು. ಎದ್ದರೆ ಕೂತರೆ ಶಿಬಿಯನ್ನು ಚುಚ್ಚು ಮಾತುಗಳಿಂದ ಚುಚ್ಚಿ ನರಳಿಸತೊಡಗಿದ್ದ. ದೇಬೂವನ್ನು ಅವಳ ಪ್ರಿಯತಮನೆಂದೂ ಅವನೊಡನೆ ಏನೆಲ್ಲ ರಾಸಲೀಲೆ ನಡೆಸಿದವಳೆಂದೂ ಈ ಪರ ಊರಿನ ಈ ಗಂಡಸರೆದುರೂ ಕುಡಿದ ನಶೆಯಲ್ಲಿ ಬೊಗಳತೊಡಗಿದ.

ಸುಖಾಸುಮ್ಮನೇ ಶಿಬಿಯನ್ನು ಮಾತನಾಡಿಸಿಕೊಂಡು ಬರುವ ದೀಪೂವಿನ ಗೆಳೆಯರ ದಂಡಿಗೆ ಭಯವೆನಿಸಲಿಲ್ಲ. ಮಳೆಯಲ್ಲಿ ತೊಯ್ದು ಗುಬ್ಬಚ್ಚಿಯಂತೆ ಶಿಬಿ ನಾಚಿಕೆ ಅವಮಾನದಲ್ಲಿ ಮುದುರಿಕೊಂಡಷ್ಟೂ ನಿರ್ಲಜ್ಜರ ಭಂಡತನ ಬೆಳೆಯತೊಡಗಿತು.

ದೀಪೂ ತನ್ನ ದರೋಗಾ ಮಾವನಿಗೆ ಅವನ ಮಗಳ ಬಗ್ಗೆ ಇಲ್ಲ ಸಲ್ಲದ ಮಾತುಗಳನ್ನು ತಿಳಿಸಿ ಅವರು ತಲೆತಗ್ಗಿಸುವಂತೆ ಮಾಡತೊಡಗಿದ್ದ... 'ನಿಮ್ಮ ಮಗಳನ್ನು ನನಗೆ ಗಂಟುಹಾಕಿಕೊಡುವ ಬದಲಿಗೆ ಆ ದೇಬೂ ನಾಯಿಕುನ್ನಿಗೆ ಕಟ್ಟಿದ್ದರೆ ನಿಮ್ಮ ಮಗಳ ತೆವಲು ತೀರಿರುತ್ತಿತ್ತು. ಅಲ್ಲಿ ಅವನು ಸಿಗದಿದ್ದರೇನಾಯಿತು. ಇಲ್ಲಿ ಅವಳಿಗೆ ಸಾಕುವ ಮಿಂಡರು ಬಹಳಷ್ಟಿದ್ದಾರೆ. ನಿಮ್ಮ ಘನತೆಯನ್ನು ನೋಡಿಯೇ ನಿಮ್ಮ ಮಗಳನ್ನು ನಾವು ಒಪ್ಪಿದ್ದು ದರೋಗಾ ಬಾಬೂಗಳೇ' ಎಂದು ಬಾಯಿಗೆ ಬಂದದ್ದನ್ನೆಲ್ಲ ಕಾರಿಕೊಂಡಿದ್ದ ದೀಪು.

ಊರಿಗೆ ಹೋಗುತ್ತೇನೆ, ನನ್ನನ್ನು ಕಳಿಸಿಬಿಡು "ಎಂದು ಶಿಬಿ ಗೋಗರೆದರೂ ಕೇಳುತ್ತಿಲ್ಲ ಅವಳ ಗಂಡ. ಅಪ್ಪನಿಗೆ ಫೋನ್ ಮಾಡಿದರೆ ಅಪ್ಪ ಸರಿಯಾಗಿ ಮಾತಾಡುತ್ತಿಲ್ಲ"–ಅಮ್ಮನಿಗೆ 'ಬಾ ಮಗಳೇ ನಾನಿದೀನಿ' ಅನ್ನುವ ಬಾಯಿಲ್ಲ.

ಹೇಗೋ ಹರಸಾಹಸ ಮಾಡಿ ಶಿಬಿಯೇನೋ ರೈಲು ಹತ್ತಿದಳು.

ಅತ್ತ ದೇಬೂವಿನ ದೆಸೆಯಿಂದಲೇ ಶಿಬಿಯ ಬದುಕು ಮೂರಾಬಟ್ಟೆಯಾಯಿತೆಂಬ ದರೋಗಾ ಬಾಬೂಗಳ ಉಗ್ರ ಕೋಪಕ್ಕೆ ಗುರಿಯಾದ ದೇಬೂವಿನ ಆತ್ಮ ಸೀಬೇ ಮರದಲ್ಲಿಯೇ ಕಾಯಿಯಾಗಿ ಉಳಿದುಹೋಯ್ತು.

***ರೇಣುಕಾ ನಿಡಗುಂದಿ***

**ವ್ಯಕ್ತಿ ವಿಶೇಷ**

# ಕನ್ನಡ ಪ್ರೇಮಿ ಯು.ಎ. ವಸಂತ ರಾವ್

ದೆಹಲಿ, ಎನ್.ಸಿ.ಆರ್. ಭಾಗವಾದ ಗುರ್‌ಗಾಂವ್‌ನಲ್ಲಿ ಕನ್ನಡ ಚಟುವಟಿಕೆಗಳನ್ನು ಆರಂಭಿಸಿದ ಹಿರಿಯರಲ್ಲಿ ಯು.ಎ. ವಸಂತ ರಾವ್ ಪ್ರಮುಖರು. ಅವರ ತಂದೆ ದಿ. ಅಣ್ಣಪ್ಪ ರಾವ್, ತಾಯಿ ದಿವಂಗತ ಶ್ರೀಮತಿ ಸುಶೀಲಾ ರಾವ್. ಇವರ ಆರು ಮಕ್ಕಳಲ್ಲಿ ಇವರೇ ಹಿರಿಯರಾಗಿ 29.03.1950ರಲ್ಲಿ ಮಂಗಳೂರು ಸಮೀಪದ ಉಜಿರೆಯಲ್ಲಿ ಜನಿಸಿದರು.

ಧರ್ಮಸ್ಥಳದ ಮಂಜುನಾಥೇಶ್ವರ ಹೈಸ್ಕೂಲ್‌ನಲ್ಲಿ ಮೆಟ್ರಿಕ್‌ವರೆಗೂ ಓದಿ, ನಂತರ ಅಲ್ಲೇ ಇದ್ದ ಟೈಪಿಂಗ್ ಸೆಂಟರ್‌ನಲ್ಲಿ ವ್ಯಾಸಂಗ ಮಾಡಿ ಆಗ ತಾನೆ ಪ್ರಾರಂಭಗೊಂಡ ಜಯಲಕ್ಷ್ಮಿ ಬ್ಯಾಂಕ್‌ನಲ್ಲಿ ಕ್ಲರ್ಕ್ ಆಗಿ ತಂದೆಯ ಹೆಗಲಿಗೆ ಹೆಗಲಾಗಿ ದುಡಿಮೆಯ ಹಾದಿ ಹಿಡಿದರು.

ಮುಂದೆ ಹಿಂದೂಸ್ಥಾನ್ ಲಿವರ್‌ನಲ್ಲಿ ಸೇಲ್ಸ್ ರೆಪ್ರಸೆನ್‌ಟೇಟೀವ್ ಆಗಿ ಮೂರು ವರ್ಷ ಸೇವೆ ಸಲ್ಲಿಸಿ 1973ರಲ್ಲಿ ಗುರ್‌ಗಾಂವ್‌ಗೆ ಆಗಮಿಸಿ ಮಾಲ್ಟ್ ಇಂಡಿಯಾ ಕಂಪನಿಯಲ್ಲಿ ಅಸಿಸ್ಟೆಂಟ್ ಆಗಿ ಸೇವೆ ಸಲ್ಲಿಸಿದರು. ನಂತರ ಇಂಡಸ್ಟ್ರಿಯಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಮುಗಿಸಿ 1981ರಲ್ಲಿ ಇಂಪೀರಿಯಲ್ ಮಾಲ್ಟ್ ಕಂಪನಿಗೆ ಮ್ಯಾನೇಜರ್ ಆಗಿ ಪದೋನ್ನತಿ ಪಡೆದರು.



**ಗುರ್‌ಗಾಂವ್ ಕನ್ನಡ ಸಂಘದ ಕಾರ್ಯಕ್ರಮವೊಂದನ್ನು ಉದ್ಘಾಟಿಸುತ್ತಿರುವ ಯು.ಎ. ವಸಂತ ರಾವ್. ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ದಿ. ಐ. ರಾಮಮೋಹನ್ ರಾವ್ ಅವರನ್ನೂ ಕಾಣಬಹುದು.**

ವಸಂತ ರಾವ್ ಕನ್ನಡ ಪ್ರೇಮಿ. ಅವರು ಕೆಲ ಕನ್ನಡಿಗರೊಂದಿಗೆ ಸೇರಿ ಗುರ್‌ಗಾಂವ್‌ನಲ್ಲಿ ಕನ್ನಡ ಸಂಘ ಕಟ್ಟಿದ ಜಕಣಾಚಾರಿ.1986 ರಿಂದ ಮೂರು ಬಾರಿ ಅಧ್ಯಕ್ಷರಾಗಿ ಕನ್ನಡಿಗರನ್ನು ಸಂಘಟಿಸಿದ ಕೀರ್ತಿ ಇವರದಾಗುತ್ತದೆ.



ಇವರ ಸಮಯದಲ್ಲಿ ಗುರುಗಾಂವ್ ನಗರದಲ್ಲಿ ಗಣೇಶ ಉತ್ಸವ ಶುರುವಾಯಿತು. ಕರ್ನಾಟಕ ರಾಜ್ಯೋತ್ಸವ, ಯುಗಾದಿ ಮಿಲನ, ಸತ್ಯನಾರಾಯಣ ಪೂಜೆ ಮತ್ತು ವಾರ್ಷಿಕ ಆಟೋಟಗಳನ್ನು ಆರಂಭಿಸಲಾಗಿತ್ತು.

ಇವರ ಅಗಣಿತ ಪ್ರಾಮಾಣಿಕ ಕನ್ನಡಸೇವೆಗೆ ಬೆಂಬಲ ನೀಡಿದವರು ಇವರ ಮಡದಿ ಶ್ರೀಮತಿ ಕಲ್ಪನಾರವರು ಮತ್ತು ಮಕ್ಕಳಾದ ಅಮಿತ್ ಮತ್ತು ಅಕ್ಷತ. ಇಬ್ಬರಿಗೂ ಮದುವೆ ಮಾಡಿ ಆದರ್ಶ ತಂದೆಯಾಗಿ ಮೊಮಕ್ಕಳಿಗೆ ಪ್ರೀತಿಯ ತಾತ ಇವರಾಗಿದ್ದಾರೆ.

ಈಗಲೂ ಕನ್ನಡ ಸಂಘದಲ್ಲಿ ಓರ್ವ ಕಾರ್ಯಕರ್ತರಂತೆ ನಿಸ್ವಾರ್ಥ ಸೇವೆ ಸಲ್ಲಿಸುವುದರಲ್ಲಿ ಅವರು ಮುಂದಿರುತ್ತಾರೆ. ಅವರ ಸಾರ್ಥಕತೆಯ ಸಾಧನೆಗೆ ನಮ್ಮ ಹೃದಯ ಪೂರ್ವಕ ನಮನಗಳು.

***ಸತೀಶ್ ಬಸವಾರಾಧ್ಯ***

# ಥಾಮಸ್ ಆಲ್ವ ಎಡಿಸನ್



ಚಿಕ್ಕವನಿದ್ದಾಗ ಥಾಮಸ್ ಆಲ್ವ ಎಡಿಸನ್ ತುಂಬ 'ಕಿಡಿಗೇಡಿ' ಆಗಿದ್ದ. ಅದಕ್ಕಾಗಿ ಎಲ್ಲರಿಂದಲೂ ಚೆನ್ನಾಗಿ ಬೈಸಿಕೊಳ್ಳುತ್ತಿದ್ದ, ಒಮ್ಮೊಮ್ಮೆ ಏಟೂ ತಿನ್ನುತ್ತಿದ್ದ. ಆದರೆ ಈತನ ಅಂದಿನ ಕಿಡಿಗೇಡಿತನದ ಹಿಂದೆ ಎಷ್ಟು ಅದ್ಭುತವಾದ ಪ್ರತಿಭಾಶಕ್ತಿ ರೂಪಗೊಳ್ಳುತ್ತಲಿತ್ತು ಎಂಬುದು ಯಾರಿಗೂ ತಿಳಿದಿರಲಿಲ್ಲ.

ಇಂದು ನಾವೇನನ್ನು ಉಪಯೋಗಿಸುತ್ತಿದ್ದೇವೋ ಅಂತಹ ಬಹುತೇಕ ವಸ್ತುಗಳಿಗೆ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಕಾರಣಕರ್ತರಾಗಿಯೂ ಹಾಗೂ ಮುಂದೆ ಬಂದ ಹಲವಾರು ಬುದ್ಧಿವಂತ ಸಾಹಸಿಗಳಿಗೆ ಪ್ರೇರಕರೂ ಆದ ಮಹಾನ್ ವಿಜ್ಞಾನಿ ಥಾಮಸ್ ಆಲ್ವಾ ಎಡಿಸನ್. ಪರಿಶ್ರಮ, ಬುದ್ಧಿವಂತಿಕೆ, ವ್ಯವಹಾರ ಚಾತುರ್ಯ ಇವುಗಳ ಸಂಗಮವೇ ಯಶಸ್ಸು ಎನ್ನುವುದಕ್ಕೆ ಮಾದರಿ ಥಾಮಸ್ ಆಲ್ವಾ ಎಡಿಸನ್.

ಥಾಮಸ್ ಆಲ್ವಾ ಎಡಿಸನ್ ಅವರು ಕಂಡು ಹಿಡಿದಷ್ಟು ಹೊಸ ಹೊಸ ಆವಿಷ್ಕಾರಗಳನ್ನು ಇತ್ತೀಚಿನವರೆಗೆ ಯಾರೂ ಮಾಡಿರಲಿಲ್ಲ. ಅವರು ಸದಾ ಪರಿಶ್ರಮಿ. ಅವರೊಮ್ಮೆ ಘೋಷಣೆ ಮಾಡಿದ್ದರು, ಪ್ರಯೋಜನವಿಲ್ಲದ್ದನ್ನು, ಲಾಭವಿಲ್ಲದ್ದನ್ನು ನಾನು ಕಂಡು ಹಿಡಿಯುವುದೇ ಇಲ್ಲ ಅವರ ಹೆಸರಿನಲ್ಲಿರುವಷ್ಟು ಪೇಟೆಂಟುಗಳು ಮತ್ತಾರ ಹೆಸರಿನಲ್ಲಿ ಇರಲಿಲ್ಲ.

ಎಡಿಸನ್ ತುಂಬ ಪರಿಶ್ರಮಪಟ್ಟು ವಿದ್ಯುತ್ ಬಲ್ಬನ್ನು ಕಂಡು ಹಿಡಿದರು. ಅದಕ್ಕಾಗಿ ಅವರು ಸುಮಾರು ಎರಡು ಸಾವಿರ ಪ್ರಯೋಗಗಳನ್ನು ಮಾಡಿದ್ದರಂತೆ. ಅಷ್ಟು ಪ್ರಯೋಗಗಳಾದ ಮೇಲೆ ಸಫಲತೆ ದೊರಕಿತ್ತು. ಯಾರೋ ಅವರನ್ನು ಕೇಳಿದರಂತೆ, 'ನೀವು ಎರಡು ಸಾವಿರ ಬಾರಿ ವಿಫಲರಾದಿರಂತೆ'. ಅದಕ್ಕೆ ಎಡಿಸನ್, 'ನಾನು ಎರಡು ಸಾವಿರ ಬಾರಿ ಸೋಲಲಿಲ್ಲ. ಯಾವ ರೀತಿ ಮಾಡಿದರೆ ಬಲ್ಬನ್ನು ಮಾಡುವುದು ಸಾಧ್ಯವಿಲ್ಲ ಎಂಬುದನ್ನು ದಾಖಲಿಸಿ ಇಟ್ಟಿದ್ದೇನೆ' ಎಂದರಂತೆ. ಇದು ಅವರ ಸಕಾರಾತ್ಮಕತೆಯ ಪ್ರತೀಕ. ಬಲ್ಬನ್ನೇನೋ ಕಂಡು ಹಿಡಿದಿದ್ದಾಯಿತು. ಅದರ ತಯಾರಿಕೆ ಪ್ರಾರಂಭವಾಯಿತು. ಫ್ಯಾಕ್ಟರಿ ಶುರುವಾಗಿ ಬಲ್ಬುಗಳು ಮಾರುಕಟ್ಟೆಗೆ ಬರತೊಡಗಿದವು. ಎಡಿಸನ್ ಲೆಕ್ಕ ಹಾಕಿದರು. ಒಂದು ಬಲ್ಬು ತಯಾರಾಗಲು ಒಂದು ಡಾಲರ್ ಖರ್ಚಾಗುತ್ತಿತ್ತು. ಆದರೆ ಎಡಿಸನ್ ಬಲ್ಬನ್ನು ನಲವತ್ತು ಸೆಂಟಿಗೆ ಮಾರತೊಡಗಿದರು. ಅಂದರೆ ಪ್ರತಿಯೊಂದು ಬಲ್ಬಿನಿಂದಲೂ ಅರವತ್ತು ಸೆಂಟು ನಷ್ಟವಾಗುತ್ತಿತ್ತು. ಕಂಪೆನಿಯ ಜನ ಎಡಿಸನ್ರಿಗೆ ಬುದ್ಧಿ ಹೇಳಿ ಬೆಲೆಯನ್ನು ಒಂದು ಡಾಲರನ್ನಾದರೂ ಇಡಲು ಹೇಳಿದರು. ಆದರೆ ಅವರು ಕೇಳಲಿಲ್ಲ.

ಈಗ ಬೃಹತ್ ಪ್ರಮಾಣದಲ್ಲಿ ಬಲ್ಬು ತಯಾರಿಸಲು ಮತ್ತೆ ಬ್ಯಾಂಕಿಗೆ ಸಾಲಕ್ಕಾಗಿ ಹೋದರು. ಅವರು ಇವನಿಗೆ ಸಾಲ ಕೊಡಲು ಸಾಧ್ಯವಿಲ್ಲವೆಂದರು, 'ನಿಮಗೇನಾದರೂ ವ್ಯವಹಾರ ಜ್ಞಾನ ಇದೆಯಾ' ತಯಾರಿಕೆಯ ವೆಚ್ಚ ಒಂದು ಡಾಲರ್ ಇದ್ದಾಗ ನೀವು ನಲವತ್ತು ಸೆಂಟಿಗೆ ಮಾರಿದಿರಿ. ನಂತರ ತಯಾರಿಕೆ ವೆಚ್ಚ ಅರವತ್ತು ಸೆಂಟ್ ಆದಾಗಲೂ ನಲವತ್ತಕ್ಕೇ ಮಾರುತ್ತಿದ್ದೀರಿ. ನೀವು ದಿವಾಳಿಯಾಗಲೇಬೇಕು ಎಂದು ಹಟ ತೊಟ್ಟಂತೆ ಕಾಣುತ್ತದೆ. ಇಂಥ ಕಂಪೆನಿಗೆ ನಾವು ಧನಸಹಾಯ ಮಾಡಲಾರೆವು? ಎಂದು ಖಡಾಖಂಡಿತವಾಗಿ ಹೇಳಿದರು. ಎಡಿಸನ್ ಬಿಟ್ಟಾರೆಯೇ? ಅವರೊಂದಿಗೆ ವಾದ ಮಾಡಿದರು, ಬೇಡಿಕೊಂಡರು. ತನ್ನ ಕಾರ್ಖಾನೆಯನ್ನೇ ಒತ್ತೆ ಇಡುವುದಾಗಿ ಹೇಳಿದರು. ಅವರೂ ಒಪ್ಪಿ ಸಾಲ ನೀಡಿದರು.

ಈ ಬಾರಿ ಲಕ್ಷಾಂತರ ಬಲ್ಬುಗಳನ್ನು ತಯಾರಿಸಿದರು. ಈಗ ಬಲ್ಬಿನ ತಯಾರಿಕಾ ವೆಚ್ಚ ಇಪ್ಪತ್ತು ಸೆಂಟಾಯಿತು. ಆದರೂ ಎಡಿಸನ್ ನಲವತ್ತು ಸೆಂಟಿಗೇ ಮಾರಿದರು. ಅವರಿಗೆ ಎಷ್ಟು ಲಾಭ ಬಂತೆಂದರೆ ಹಿಂದಿನ ನಷ್ಟವೆಲ್ಲ ಕೊಚ್ಚಿಹೋಯಿತು. ಜನ ಬೆರಗಾದರು, ಅದು ಏಕೆ ಮೊದಲು ಹಾಗೆ ನಷ್ಟದಲ್ಲಿ ಮಾರಿದಿರಿ ಎಂದು ಕೇಳಿದಾಗ ಎಡಿಸನ್ ಹೇಳಿದರು, 'ಮೊದಲಿಗೇ ನಾನು ಬೆಲೆ ಹೆಚ್ಚಿಗಿಟ್ಟಿದ್ದರೆ ಬಹಳ ಜನ ಕೊಂಡುಕೊಳ್ಳುತ್ತಿರಲಿಲ್ಲ. ಅವರಿಗೆ ವಿದ್ಯುತ್ ಬಲ್ಬಿನ ಉಪಯುಕ್ತತೆಯ ಅರಿವಾದರೆ ಅವರು ಅದನ್ನು ಬಿಟ್ಟಿರುವುದು ಸಾಧ್ಯವಿಲ್ಲ. ಆಗ ನಾನು ಬೆಲೆ ಹೆಚ್ಚು ಮಾಡಿದರೂ ಯಾರೂ ಗೊಣಗದೇ ಕೊಂಡುಕೊಳ್ಳುತ್ತಾರೆ.' ಇದು ಎಡಿಸನ್ರ ವ್ಯವಹಾರ ಚತುರತೆ.

ಥಾಮಸ್ ಆಲ್ವ ಎಡಿಸನ್ ಗ್ರಾಮಫೋನ್, ವಿದ್ಯುದ್ದೀಪ, ಕೈನಟೊಸ್ಕೋಪ್, ಸಂಚಯನ ವಿದ್ಯುತ್ಕೋಶ, ಕಬ್ಬಿಣ ಅದುರು ಬೇರ್ಪಡಿಸುವ ಕಾಂತೀಯ ಸಲಕರಣೆ, ಮೊದಲಾದ ಅಮೂಲ್ಯ ವಸ್ತುಗಳನ್ನು ಜಗತ್ತಿಗೆ ನೀಡಿದ ಮಹಾವಿಜ್ಞಾನಿ. ಅವರು ಫೆಬ್ರುವರಿ 11. 1847ರಂದು ಅಮೆರಿಕದ ಮಿಲಾನ್ ಎಂಬ ಪಟ್ಟಣದಲ್ಲಿ ಜನಿಸಿದರು. ತಂದೆಯ ಹೆಸರು ಸಾಮ್ಯುಯೆಲ್ ಎಡಿಸನ್, ತಾಯಿ ನ್ಯಾನ್ಸಿ. ಚಿಕ್ಕವನಿದ್ದಾಗ ಥಾಮಸ್ ಆಲ್ವ ಎಡಿಸನ್ ತುಂಬ 'ಕಿಡಿಗೇಡಿ' ಆಗಿದ್ದ. ಅದಕ್ಕಾಗಿ ಎಲ್ಲರಿಂದಲೂ ಚೆನ್ನಾಗಿ ಬೈಸಿಕೊಳ್ಳುತ್ತಿದ್ದ, ಒಮ್ಮೊಮ್ಮೆ ಏಟೂ ತಿನ್ನುತ್ತಿದ್ದ. ಆದರೆ ಈತನ ಅಂದಿನ ಕಿಡಿಗೇಡಿತನದ ಹಿಂದೆ ಎಷ್ಟು ಅದ್ಭುತವಾದ ಪ್ರತಿಭಾಶಕ್ತಿ ರೂಪಗೊಳ್ಳುತ್ತಲಿತ್ತು ಎಂಬುದು ಯಾರಿಗೂ ತಿಳಿದಿರಲಿಲ್ಲ. ಮೊಟ್ಟೆಗಳಿಗೆ ಕಾವು ಕೊಡಲು ಕೋಳಿಯೇ ಆಗ ಬೇಕೆ! ಮನುಷ್ಯರೂ ಕಾವು ಕೊಡಬಹುದಲ್ಲ ಎಂದು ಭಾವಿಸಿದ ಹುಡುಗ ಮೊಟ್ಟೆಗಳ ಮೇಲೆ ಕುಳಿತು ಕಾವು ಕೊಟ್ಟು ಮರಿಗಳು ಹೊರಬರುವುದನ್ನು ಎದುರು ನೋಡುತ್ತ ಕುಳಿತಿದ್ದ. ಮಿಚಿಗನ್ ಪ್ರಾಂತ್ಯದ ಪೋರ್ಟ್ ಹೂರಾನ್ ನಲ್ಲಿ ಶಾಲೆಯಲ್ಲಿ ಶಿಕ್ಷಕರಿಗೆ ಕಿರಿಕಿರಿಯಾಗುವಂಥ ಪ್ರಶ್ನೆಗಳನ್ನು ಕೇಳುವುದು, ಪಾಠದ ಕಡೆಗೆ ಲಕ್ಷ್ಯ ಕೊಡದೆ ಸ್ಲೇಟಿನ ಮೇಲೆ ಏನಾದರೂ ಗೀಚುವುದು ಮಾಡುತ್ತಿದ್ದ. ಆತನ ಶಿಕ್ಷಕಿ ಚೆನ್ನಾಗಿ ಬೈದ ಮೇಲೆ ಶಾಲೆಯನ್ನೇ ಬಿಟ್ಟ. ತಾಯಿಯೇ ಆತನಿಗೆ ಮನೆಯಲ್ಲಿ ಪಾಠ ಹೇಳಬೇಕಾಯಿತು. ಬಲೂನುಗಳಿಗೆ ಅನಿಲ ತುಂಬಿದಾಗ ಅವು ಹಾರುತ್ತವೆ, ಹಾಗೆಯೇ ಅನಿಲ ತುಂಬಿದ ಮನುಷ್ಯ ಹಾರಬಹುದೆ? ಎಡಿಸನ್ ಆ ಪ್ರಯೋಗವನ್ನೂ ಮಾಡಿದ! ಅನಿಲ ಹೊರಡಿಸುವ ಸೈಡ್ ಲಿಟ್ಜ್ ಪುಡಿಯನ್ನು ತಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಹುಡುಗನೊಬ್ಬನಿಗೆ ತಿನ್ನಿಸಿದ. ಆತ ಹಾರುವ ಬದಲು ಹೊಟ್ಟೆ ನೋವಾಗಿ ನೆಲದ ಮೇಲೆ ಬಿದ್ದ. ಥಾಮಸ್ ಎಡಿಸನ್ ಗೆ ಪುನಃ ಏಟು. ಇನ್ನೂ ಹದಿನೈದು ವರ್ಷದವನಿದ್ದಾಗಲೇ ಎಡಿಸನ್ 'ದಿ ವೀಕ್ಲಿ ಹೆರಾಲ್ಡ್' ಎಂಬ ತನ್ನದೇ ಆದ ಒಂದು ಸಾಪ್ತಾಹಿಕ ಪತ್ರಿಕೆಯನ್ನು ಪ್ರಕಟಿಸಿದ. ರೈಲು ಡಬ್ಬಿಯನ್ನೇ ಪ್ರಯೋಗಾಲಯ ಮಾಡಿಕೊಂಡು ಪ್ರಯೋಗಗಳನ್ನೂ ಮುಂದುವರಿಸಿದ. ಒಮ್ಮೆ ರಂಜಕದ ತುಂಡು ಬಿದ್ದು ರೈಲು ಡಬ್ಬಿಗೆ ಬೆಂಕಿ ಹೊತ್ತಿದಾಗ ಗಾರ್ಡ್ ಆತನ ಕಿವಿ ಹಿಡಿದು ಥಳಿಸಿದ. ಥಾಮಸ್ ನ ಕಿವಿಯೇ ಕಿವುಡಾಯಿತು. ಆದರೆ ರೈಲು ನಿಲ್ದಾಣದ ಅಧಿಕಾರಿಯೊಬ್ಬನ ಮಗು ಹಳಿಗೆ ಸಿಕ್ಕು ಸಾಯುವ ಸಂದರ್ಭದಲ್ಲಿ ಎಡಿಸನ್ ತನ್ನ ಪ್ರಾಣದ ಪರಿವೆಯಿಲ್ಲದೆ ಆ ಮಗುವನ್ನು ರಕ್ಷಿಸಿದ. ಅದನ್ನು ಮೆಚ್ಚಿದ ರೈಲು ನಿಲ್ದಾಣದ ಅಧಿಕಾರಿ ಆತನಿಗೆ ಟೆಲಿಗ್ರಾಫ್ ನಿರ್ವಹಣೆ, ಮೋರ್ಸ್ ಸಂಕೇತ ಕಲಿಸಿದ. ಥಾಮಸ್ ಆಲ್ವ ಎಡಿಸನ್ ಟೆಲಿಗ್ರಾಫ್ ನಲ್ಲಿ ಹಲವಾರು ಸುಧಾರಣೆಗಳನ್ನು ಮಾಡಿದರು, ಫೋನೋಗ್ರಾಮ್ ಕಂಡು ಹಿಡಿದರು, ವಿದ್ಯುದ್ದೀಪಗಳನ್ನು ತಯಾರಿಸಿದರು,

ಚಲನಚಿತ್ರ ಕ್ಯಾಮರ, ಕೈನಟೊಸ್ಕೋಪ್, ಸಂಚಯನ ವಿದ್ಯುತ್ಕೋಶ, ಕಾಂತೀಯ ಸಲಕರಣೆಗಳು ಮೊದಲಾದವುಗಳನ್ನು ಮಾರುಕಟ್ಟೆಗೆ ತಂದರು. 'ಕಿಡಿಗೇಡಿ'ಯಾಗಿದ್ದ ಹುಡುಗ ಈಗ "ಪವಾಡ ಪುರುಷ" ಆದರು. 1889ರಲ್ಲಿ ವಾಕ್ ಚಲನಚಿತ್ರಗಳನ್ನು ಎಡಿಸನ್ ಪ್ರದರ್ಶಿಸಿದರು. ಈ ಮಹಾನ್ ಸಾಧಕ ಥಾಮಸ್ ಆಲ್ವ ಎಡಿಸನ್ ಅಕ್ಟೋಬರ್ 31, 1931ರಂದು ನಿಧನ ಹೊಂದಿದರು. 1956ರಲ್ಲಿ ಅಮೆರಿಕ ದೇಶವು ವೆಸ್ಟ್ ಆರೆಂಜ್ ನಲ್ಲಿನ ಎಡಿಸನ್ ಸಂಶೋಧನಾಲಯವನ್ನು ರಾಷ್ಟ್ರೀಯ ಸ್ಮಾರಕವಾಗಿ ಘೋಷಿಸಿತು. ಈ ಮಹಾನ್ ಸಾಧಕನಿಗೆ ನಾವು ನಮಿಸೋಣ.

***ಎಸ್. ಕುಮಾರ್***
*(ವಿವಿಧ ಮೂಲಗಳಿಂದ)*

# ನವೀಕೃತ ಸ್ವಾಗತ ಕೊಠಡಿಯ ಉದ್ಘಾಟನಾ ಸಮಾರಂಭ



ನವದೆಹಲಿಯ ಲೋಧಿ ಎಸ್ಟೇಟ್‌ನಲ್ಲಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ನವೀಕೃತಗೊಂಡ ಸ್ವಾಗತ ಕೊಠಡಿಯ ಉದ್ಘಾಟನಾ ಸಮಾರಂಭವು ದಿನಾಂಕ 05.07.2020 ರವಿವಾರದಂದು ನಡೆಯಿತು. ಫೇಸ್‌ಬುಕ್ ನೇರಪ್ರಸಾರದ ಮೂಲಕ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿತ್ತು. ನವೋದಯ ವಿದ್ಯಾಲಯ ಸಮಿತಿ, ಶಾಲಾ ಸುಧಾರಣೆ-ಸಹಯೋಗ ಹಾಗೂ ಶಿಕ್ಷಣ ಮತ್ತು ಮೌಲ್ಯಮಾಪನ, ನೀತಿ ಯೋಜನೆಯ ಹಿರಿಯ ಸಲಹೆಗಾರರಾದ ರಾಮಚಂದ್ರ ಎ. ಎನ್. ಅವರು ನವೀಕೃತಗೊಂಡ ಸ್ವಾಗತ ಕೊಠಡಿಯನ್ನು ಉದ್ಘಾಟಿಸಿದರು.

ಅವರು ಸಂಸ್ಥೆಯ ಸ್ವಾಗತ ಕೊಠಡಿಯು ಒಂದು ಪುಸ್ತಕದ ಮುಖಪುಟವಿದ್ದಂತೆ. ಒಂದು ಪುಸ್ತಕವನ್ನು ಬಿಡುಗಡೆ ಮಾಡುವ ಮೊದಲು ಪುಸ್ತಕಕಾರರ ನಿರೀಕ್ಷೆ ಅದರ ಮುಖಪುಟದ ವಿನ್ಯಾಸ ಬಹಳ ಚೆನ್ನಾಗಿರಬೇಕು ಎಂದಿರುತ್ತದೆ. ಇದೇ ಒಂದು ಉದ್ದೇಶದಿಂದ ಈ ಸ್ವಾಗತ ಕೊಠಡಿಗೆ ಹೊಸ ರೂಪ ನೀಡಿದ್ದೀರಿ.  ಹೀಗೆಯೇ ಶಾಲೆಯೊಳಗಿನ ಎಲ್ಲಾ ಚಟುವಟಿಕೆಗಳಿಗೆ ಒಂದು ಹೊಸ ರೂಪ ನೀಡಿ ಮಕ್ಕಳಲ್ಲಿರುವ ಚೈತನ್ಯವನ್ನು, ಕಾರ್ಯವೈಖರಿಯನ್ನು ವರ್ಧಿಸುವ ಪ್ರಯತ್ನ ಆಗುತ್ತದೆ ಎಂಬ ಆಶಯ ನನ್ನದು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಬೇಕಾಗಿದ್ದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿಯ ಡೈರೆಕ್ಟರ್ ಜನರಲ್ ಆದ ಡಾ. ಎಸ್. ಗುರುಪ್ರಸಾದ್ ಅವರು ಕಾರ್ಯಕ್ರಮಕ್ಕೆ ಆನ್‌ಲೈನ್ ಮೂಲಕ ಶುಭಕೋರಿ ಪ್ರಪಂಚವು ಇಂದು ಕೊರೊನಾದಿಂದಾಗಿ ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸುತ್ತಿದ್ದರೂ, ಈ ಸಂಸ್ಥೆಯ ಆಡಳಿತ ಮಂಡಳಿಯ ಕಾರ್ಯಕಾರಿ ಸಮಿತಿಯು ಸಂಸ್ಥೆಯ ಏಳಿಗೆಗಾಗಿ ಶ್ರಮಿಸುತ್ತಿರುವ ಅತ್ಯುತ್ಸಾಹವನ್ನು ಮೆಚ್ಚಬೇಕು. ಭಾಷೆ ಹಾಗೂ ಸಂಸ್ಕೃತಿಯ ಬೆಳವಣಿಗೆಗೆ ಮೂಲ ಆಧಾರ ಮಕ್ಕಳು ಕಲಿಯುವ ಶಾಲೆ. ವಿದ್ಯಾರ್ಥಿಗಳ ಭಾಷಾಜ್ಞಾನ, ಸಾಂಸ್ಕೃತಿಕ, ವೈಜ್ಞಾನಿಕ ಹಾಗೂ ಬೌದ್ಧಿಕ ಬೆಳವಣಿಗೆಗಾಗಿ ಶಾಲಾ ಪರಿಸರವು ಬಹಳ ಮುಖ್ಯ. ಈ ನಿಟ್ಟಿನಲ್ಲಿ ಸ್ವಾಗತ ಕೊಠಡಿಯು ಮುಖ್ಯ ಹೆಜ್ಜೆ. ಐದಾರು ದಶಕಗಳ ಇತಿಹಾಸವಿರುವ ಈ ಸಂಸ್ಥೆಯಲ್ಲಿ ನಾಡಿನ ಸಂಸ್ಕೃತಿಯ ಬಾವುಟ ಸದಾಕಾಲ ರಾರಾಜಿಸಲಿ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ, ಈ ನಮ್ಮ ಹೊಸ ಆಡಳಿತ ಮಂಡಳಿಗೆ ಇದ್ದ ಹತ್ತು ಹಲವು ಕನಸುಗಳಲ್ಲಿ ಪ್ರಥಮ ಹೆಜ್ಜೆ ಸ್ವಾಗತ ಕೊಠಡಿಯ ನವೀಕರಣ ಆಗಿತ್ತು. ಅದು ಇಂದು ನೆರವೇರಿದೆ. ಆರಂಭದ ಹೆಜ್ಜೆಗೆ ಕೋವಿಡ್ ಎದುರಾದ್ದರಿಂದ ನಮ್ಮ ಕಾರ್ಯದ ವೇಗವು ಸ್ವಲ್ಪಮಟ್ಟಿಗೆ ಕುಂಠಿತವಾಯಿತು. ರಾಷ್ಟ್ರ ರಾಜಧಾನಿಯಲ್ಲಿ ಕಯ್ಯಾರ ಕಿಞ್ಞಣ್ಣ ರೈ ಸಭಾಂಗಣವನ್ನು ನಿರ್ಮಾಣ ಮಾಡುವ ಕನಸು ನಮ್ಮದು. ಸುಮಾರು ಒಂದು ಕೋಟಿ ರೂಪಾಯಿ ವೆಚ್ಚದ ಸಭಾಂಗಣವನ್ನು ವ್ಯವಸ್ಥಿತವಾಗಿ ನಿರ್ಮಾಣ ಮಾಡಬೇಕೆಂಬುದುಕ್ಕೆ ಅಬುದಾಭಿಯ ಸರ್ವೋತ್ತಮ ಶೆಟ್ಟಿಯವರು ಮುಂದೆ ಬಂದಿದ್ದಾರೆ. ಆರ್ಥಿಕ ವ್ಯವಸ್ಥೆ ಹದಗೆಟ್ಟ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ನಮ್ಮ ಜೊತೆ ಕೈ ಜೋಡಿಸುತ್ತೇನೆ ಎಂಬ ಭರವಸೆಯನ್ನು ನೀಡಿದ್ದಾರೆ. ಕನ್ನಡ ನಾಡುನುಡಿಗೆ ಹೋರಾಡಿದ ಹಿರಿಯ ಸಾಹಿತಿ ಕಯ್ಯಾರರಿಗೆ ಈ ಮೂಲಕ ರಾಷ್ಟ್ರ ರಾಜಧಾನಿಯಲ್ಲಿ ಗೌರವವನ್ನು ಅರ್ಪಿಸಬೇಕೆಂದಿದ್ದೇವೆ ಎಂದು ವಸಂತ ಶೆಟ್ಟಿ ಬೆಳ್ಳಾರೆ ಅವರು ಹೇಳಿದರು.

ಸಚಿವ ಪ್ರಹ್ಲಾದ್ ಜೋಶಿ ಹಾಗೂ ಸಂಸದ ನಳಿನ್ ಕುಮಾರ್ ಕಟೀಲ್ ಅವರ ಬಳಿ ಈ ಸಂಬಂಧ ನಿವೇದಿಸಿದಾಗ ಸಕಾರಾತ್ಮಕ ಭರವಸೆ ನೀಡಿದ್ದಾರೆ ಎಂದು ಹೇಳಿದರು.

ಉಪಾಧ್ಯಕ್ಷ ಟಿ. ಎಂ. ಮೈಲಾರಪ್ಪ, ಗೌರವ ಖಜಾಂಚಿ ಟಿ. ಪಿ. ಬೆಳ್ಳಿಯಪ್ಪ, ಕಾರ್ಯಕಾರಿ ಸಮಿತಿ ಸದಸ್ಯರಾದ ಮಾಲಿನಿ ಪ್ರಹ್ಲಾದ್, ಡೀನಾ ಜಾಯ್ಸ್, ಬಿ. ಎನ್. ಮೋಹನ್ ಕುಮಾರ್, ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲ ಪ್ರಶಾಂತ್ ಕುಮಾರ್ ಉಪಸ್ಥಿತರಿದ್ದರು. ಉಪಾಧ್ಯಕ್ಷ ಎನ್.ಪಿ. ಚಂದ್ರಶೇಖರ ಅವರು ಸ್ವಾಗತಿಸಿದರು. ಗೌರವ ಕಾರ್ಯದರ್ಶಿ ಡಾ. ಎಂ. ಎಸ್. ಶಶಿಕುಮಾರ್ ವಂದಿಸಿದರು. ಶಿಕ್ಷಕರಾದ ಪರಿಮಳಾ ಹಾಗೂ ರೇಖಾ ಐ. ಕಾರ್ಯಕ್ರಮ ನಿರ್ವಹಿಸಿದರು.

***ಅರವಿಂದ ಬಿಜೈ***



# ರಂಗಭೂಮಿಗೆ ಜನಪದದ ಕೊಡುಗೆ ಅಪಾರ

## -ಪ್ರೊ. ಬಿ.ಆರ್. ಪೋಲೀಸ್ ಪಾಟೀಲ್

ಕರ್ನಾಟಕವು ಜಾನಪದ ಕಲೆಗಳ ಬೀಡು. ನಮ್ಮ ನಾಡಿನಲ್ಲಿ ಊರಿಗೊಂದೊಂದು ಜಾನಪದ ಕಲೆ ಇರುವುದೆಂದರೂ ತಪ್ಪಾಗಲಾರದು. ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಈ ಕಲೆಯ ಮೂಲವಂತೂ ಅಗೆದಷ್ಟಕ್ಕೂ ಕೊನೆಗೊಳ್ಳದೇ ಸಿಗುತ್ತಲೇ ಇರುವುದು ಇದರ ಪ್ರಾಚೀನತೆಯನ್ನು ವ್ಯಕ್ತಪಡಿಸುತ್ತದೆ. ಇಂಥ ಕಲೆಯು ಕನ್ನಡ ರಂಗಭೂಮಿಯ ಮೇಲೆ ಯಾವ ರೀತಿ ಪ್ರಭಾವ ಬೀರಿದೆ ಎಂಬುದನ್ನು ತಿಳಿಯಲು ಹಾಗೂ ಅದನ್ನು ದಾಖಲು ಮಾಡಿಕೊಳ್ಳಲು ಮುಂದಾದ ದಿನಕರ ಫೌಂಡೇಶನ್, ದಿನಾಂಕ 19.07.2020ರಂದು ನಿಸ್ತಂತು ಮಾಧ್ಯಮದ ಮೂಲಕ ಒಂದು ಕಾರ್ಯಕ್ರಮವನ್ನು ಆಯೋಜಿಸಿತ್ತು.





ಅಂದು ಸಂಪನ್ಮೂಲ ವ್ಯಕ್ತಿಯಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪ್ರೊ. ಬಿ.ಆರ್. ಪೋಲೀಸ್‌ಪಾಟೀಲರನ್ನು ಆಮಂತ್ರಿಸಲಾಗಿತ್ತು. ಸ್ವತಃ ಲಾವಣಿಕಾರರು, ಕವಿಗಳು, ಸಾಹಿತಿಗಳೂ, ಗಾಯಕರೂ ಆದ ಅವರು ತಮ್ಮ ತಂಡದೊಂದಿಗೆ ನಾಂದಿ ಹಾಡನ್ನು ಹಾಡುವುದರೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸಂವಾದದಲ್ಲಿ ಶಿವಾನಂದ ಇಂಗಳೇಶ್ವರರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ, ಪ್ರೊ. ಪಾಟೀಲರು ಕೆನೆತ್ ಮ್ಯಾಗ್ಗನ್ನನ ಪ್ರಕಾರ ನಾಟಕ ಮತ್ತು ರಂಗಭೂಮಿಗಳು ಧರ್ಮಗಳಿಗಿಂತ ಹಿಂದಿನವು, ಅವು ಮೊತ್ತಮೊದಲ ಮಾನವನೊಂದಿಗೆ ಆರಂಭಗೊಂಡವು. ಆತ ಬೇಟೆಯಾಡುವುದಕ್ಕಾಗಿ ಪ್ರಾಣಿ-ಪಕ್ಷಿಗಳ ಕೂಗು ಹಾವಭಾವಗಳನ್ನು ಅನುಕರಿಸುವುದರೊಂದಿಗೆ ನಾಟಕದ ಜನನವಾಗಿದೆ. ಹೀಗಾಗಿ ನಾಟಕ ಮತ್ತು ರಂಗಭೂಮಿಗಳ ಹುಟ್ಟು ಬದುಕನ್ನು ಕಟ್ಟಿಕೊಳ್ಳುವುದಕ್ಕಾಗಿ ಅಂತ ಹೇಳಬಹುದು ಎಂದು ಹೇಳಿದರು. ಶ್ರೀನಿವಾಸ್ ರಾವ್ ಮತ್ತು ಹಿ.ಚಿ. ಬೋರಲಿಂಗಯ್ಯನವರ ಗ್ರಂಥಗಳಲ್ಲಿ ನಾಟಕಗಳ ಪ್ರಾಚೀನತೆಯನ್ನು ಯಾವ ರೀತಿ ಹೇಳಲಾಗಿದೆ ಎಂಬುದನ್ನು ಎತ್ತಿ ಹೇಳಿದ ಅವರು ಜಾನಪದವು ನಾಟಕಕ್ಕೆ ಯಾವರೀತಿ ಪೂರಕವಾಗಿ ರಂಗಭೂಮಿಯನ್ನು ಸಮೃದ್ಧಗೊಳಿಸಿತು ಎಂಬುದನ್ನು ದೊಡ್ಡಾಟ, ಶ್ರೀಕೃಷ್ಣ ಪಾರಿಜಾತಗಳ ಉದಾಹರಣೆಯೊಂದಿಗೆ ಸವಿವರವಾಗಿ ತಿಳಿಸಿದರು. ಹಾಲೀ ರಂಗಭೂಮಿಯಲ್ಲಿ ಜಾನಪದದ ಸತ್ವವನ್ನು ಬಳಸಿಕೊಂಡರೆ, ಗಾದೆ ಮಾತುಗಳನ್ನೋ, ಪಡೆನುಡಿಗಳು, ಗ್ರಾಮೀಣ ಸೊಗಡನ್ನು ಯಥಾವತ್ ಉಪಯೋಗಿಸಿದರೆ



ನಾಟಕಗಳ ಪ್ರಭಾವ ಹೆಚ್ಚಾಗುತ್ತದೆ ಎಂಬುದರಲ್ಲಿ ಸಂಶಯವಿಲ್ಲ ಎಂದು ಹೇಳಿದ ಅವರು ರಂಗಭೂಮಿಯನ್ನು ಉಳಿಸಿಕೊಂಡು ಹೋಗುವುದು ಈಗೀಗ ಕಷ್ಟಕರವಾಗುತ್ತಿದೆ, ಆದರೂ ಕೂಡಾ ದಿನಕರದಂಥ ಹವ್ಯಾಸೀ ತಂಡಗಳು ಪ್ರಯೋಗಶೀಲವಾಗಿ ಉಳಿದಿರುವುದು ಸಮಾಧಾನಕರವಾಗಿದೆ ಎಂದು ಅಭಿಪ್ರಾಯಪಟ್ಟರು.

ಕಲಾವಿದರಾದ ಶ್ರೀಮತಿ ಹೇಮಲತಾ ಗುಡ್ಡೇಗೌಡ, ಜಯಶ್ರೀ ಬಸವರಾಜು, ಡಾ. ಭಾರ್ಗವಿ, ಕುಮಾರಿ ಗೀತಾ ವೈದ್ಯ, ಪೂರ್ಣಿಮಾ ಅಡಿಗ, ಲಕ್ಷ್ಮೀ ಡಂಗಿ ಹಾಗೂ ಶ್ರೀ ಸಂತೋಷ್ ಕುಮಾರ್ ಉಪಾಧ್ಯಾಯ ಅವರು ಬೀಸೋಕಲ್ಲು ಪದ, ಗರತಿ ಹಾಡು, ತತ್ವಪದ, ಜೋಗುಳ ಪದ



ಹಾಗೂ ವೀರಭದ್ರ ಒಡಪುಗಳನ್ನು ಅತ್ಯಂತ ಪ್ರಭಾವಶಾಲಿಯಾಗಿ ಪ್ರಸ್ತುತಪಡಿಸಿದರು.

ವಂದನಾರ್ಪಣೆ ಮಾಡಿದ ಸಂಚಾಲಕ ಶಿವಾನಂದ ಇಂಗಳೇಶ್ವರ್ ಅವರು ಮುಂಬರುವ ದಿನಗಳಲ್ಲಿ ದಿನಕರ ಫೌಂಡೇಷನ್ ಇನ್ನಷ್ಟು ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ ಎಂದು ತಿಳಿಸಿದರು. ಜೂಂ ಆಪ್ ಮೂಲಕ ನಡೆದ ಈ ಕಾರ್ಯಕ್ರಮವನ್ನು ಟಿ.ಎಸ್. ರಮೇಶ್, ಬೆಂಗಳೂರು ಅವರು ತಾಂತ್ರಿಕ ಸಹಾಯ ನೀಡುವುದರೊಂದಿಗೆ ಸುಗಮವಾಗಿ ನಡೆಯುವಂತೆ ನೋಡಿಕೊಂಡರು. ಸಂತೋಷ್ ಕುಮಾರ್ ಉಪಾಧ್ಯಾಯರ ಕಾರ್ಯಕ್ರಮ ನಿರ್ವಹಣಾ ಶೈಲಿಯು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಒಟ್ಟಿನಲ್ಲಿ ಗೃಹಬಂಧನದಲ್ಲಿರುವ ಕನ್ನಡಿಗರಿಗೆ ಒಂದು ಉತ್ತಮ ಕಾರ್ಯಕ್ರಮವನ್ನು ನೀಡುವಲ್ಲಿ ದಿನಕರ ಯಶಸ್ವಿಯಾಯಿತು.

ಕಾರ್ಯಕ್ರಮವನ್ನು ವೀಕ್ಷಿಸಲು ಈ ಲಿಂಕ್‌ಗೆ ಭೇಟಿ ಕೊಡಿ : https://youtu.be/7-w9kPBBzcg

***ಯು. ಎಸ್ ಅನಂತ್, ಬವಲಾಡಿ***

# ಗಂಧರ್ವ ಕಲಾವಿದರ ವೈವಿಧ್ಯಮಯ ಕಾರ್ಯಕ್ರಮ




ಕೊರೊನಾ ಸಂಕಟ ಕಾಲದಲ್ಲಿ ಯಾವುದೇ ಸಭೆ ಸಮಾರಂಭಗಳಿಲ್ಲದೆ ಜನರು ತಮ್ಮ ಮನೆಗಳಿಂದ ಹೊರಗೆ ಕಾಲಿಡಲು ಭಯಪಡುತ್ತಿರುವ ಕ್ಲಿಷ್ಟಕರವಾದ ವಾತಾವರಣದಲ್ಲಿ, ದೆಹಲಿಯ ಗಂಧರ್ವ ತಂಡ ಇಟ್ಟ ಪುಟ್ಟ ಹೆಜ್ಜೆ ನೊಂದು ಬೆಂದಿರುವ ಮನಸ್ಸುಗಳಿಗೆ ತಕ್ಕಮಟ್ಟಿಗೆ ತಂಪೆರೆಯುವಲ್ಲಿ ಯಶಸ್ವಿಯಾಯಿತು. ದಿನಾಂಕ 26.07.2020ರಂದು ಈ ತಂಡ ಅಂತರ್ಜಾಲದ ಮೂಲಕ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಿತ್ತು.

ಅಂದಿನ ರಾಜನ್-ನಾಗೇಂದ್ರ ಜೋಡಿಯ ಆಯ್ದ ಗೀತೆಗಳ ಕಾರ್ಯಕ್ರಮ ಸುಮಾರು ಒಂದೂವರೆ ಗಂಟೆಗಳ ಕಾಲ ಪ್ರೇಕ್ಷಕರನ್ನೂ ಮನರಂಜಿಸುವಲ್ಲಿ ಸಂಪೂರ್ಣ ಯಶಸ್ವಿಯಾಯಿತು. ಕಲಾವಿದರಾಗಿ ದೆಹಲಿಯಿಂದ ಕು. ಪೂರ್ಣಿಮಾ ಅಡಿಗ, ಕು. ಸದೀತಿ ಅಂಬಳೆ, ಕು. ಏಕ್ತಾ ಮೂರ್ತಿ, ಶ್ರೀಮತಿ ಪೂಜಾ ರಾವ್, ಶ್ರೀಮತಿ ನಿವೇದಿತಾ ಶರ್ಮಾ, ಗಂಗಾಧರ್ ಆರ್, ಮಧ್ಯಪ್ರದೇಶದಿಂದ ಶ್ರೀಮತಿ ಮಮತಾ ಪ್ರವೀಣ್, ಬೆಂಗಳೂರಿನಿಂದ ಚಿದಂಬರ ಕೋಟೆ ಹಾಗೂ ವಿಶಾಲ್ ಮುರಗೋಡ ಅವರು ರಾಜನ್ ನಾಗೇಂದ್ರ ಸಂಗೀತ ಸಂಯೋಜಿಸಿದ ಸುಮಾರು 16 ಜನಪ್ರಿಯ ಹಾಡುಗಳನ್ನು ಹಾಡಿ ಪ್ರೇಕ್ಷಕರನ್ನು ರಂಜಿಸಿದರು. ನವದೆಹಲಿಯ ಕು. ಸಪ್ನಾ ಅತ್ತಾವರ್ ಅವರು "ಇಂದು ಎನಗೆ ಗೋವಿಂದ" ಹಾಡಿಗೆ ತಾಳ ಬದ್ಧವಾದ ಭರತನಾಟ್ಯವನ್ನೂ ಪ್ರಸ್ತುತಪಡಿಸಿದರು. ವಿಶಾಲ್ ಮುರಗೋಡ ಅವರು ಕಾರ್ಯಕ್ರಮ ಪ್ರಸಾರವಾಗುತ್ತಿದ್ದಂತೆಯೇ ಸ್ಥಳದಲ್ಲಿಯೇ ರಾಜನ್-ನಾಗೇಂದ್ರ ಜೋಡಿಯ ಸುಂದರ ಚಿತ್ರ ಬರೆದು, ತಮ್ಮ ಕಲಾ ನೈಪುಣ್ಯತೆಯನ್ನು ಪ್ರದರ್ಶಿಸಿದರು.

ಈ ಕಾರ್ಯಕ್ರಮದ ಮತ್ತೊಂದು ವಿಶೇಷತೆ ಎಂದರೆ ರಸಪ್ರಶ್ನೆ. ಕಾರ್ಯಕ್ರಮದುದ್ದಕ್ಕೂ ಪ್ರತಿಯೊಂದು ಹಾಡಿನ ನಂತರ ಕರ್ನಾಟಕದ ಕುರಿತ ಪ್ರಶ್ನೆಗಳನ್ನು ಕೇಳಲಾಯಿತು. ಅತೀ ಹೆಚ್ಚು ಸರಿ ಉತ್ತರ ನೀಡಿದ ಮೂವರು ಪ್ರೇಕ್ಷಕರಿಗೆ ನಗದು ಬಹುಮಾನ ನೀಡಲಾಯಿತು. ಸುಮನಾ ಅಡಿಗ-ಪ್ರಥಮ, ಪ್ರೀತಂ ಸೋಮಶೇಖರ್-ದ್ವಿತೀಯ ಹಾಗೂ ಗಿರೀಶ್ ಸಿ.ಎ.-ತೃತೀಯ ಬಹುಮಾನವನ್ನು ಪಡೆದುಕೊಂಡರು. ರಸಪ್ರಶ್ನೆ ನಿರ್ವಹಣೆಯನ್ನು ದೆಹಲಿಯ ಶ್ರೀಮತಿ ಶಾಲಿನಿ ಪ್ರಶಾಂತ್ ಅವರು ಅಚ್ಚುಕಟ್ಟಾಗಿ ನಿರ್ವಹಿಸಿದರು. ಶ್ರೀಮತಿ ಪೂಜಾ ರಾವ್ ಅವರು ಸೊಗಸಾಗಿ ಕಾರ್ಯಕ್ರಮ ನಿರೂಪಿಸಿದರು.

ಹೌಸ್‌ಫುಲ್ ಪ್ರದರ್ಶನ ಕಂಡ ಕಾರ್ಯಕ್ರಮದ ರೂವಾರಿ ಹಾಗೂ ಬೆನ್ನೆಲುಬು ಟಿ.ಎಸ್. ರಮೇಶ್ ಅವರು ಎಂದಿನಂತೆ ಶಿಸ್ತುಬದ್ಧವಾಗಿ, ಜವಾಬ್ದಾರಿಯುತವಾಗಿ ತಾಂತ್ರಿಕ ನಿರ್ವಹಣೆಯನ್ನು ವಹಿಸಿಕೊಂಡಿದ್ದರು. ಇವರಿಗೆ ತಾಂತ್ರಿಕ ನಿರ್ವಹಣೆಯಲ್ಲಿ ಸಹಕರಿಸಿದವರು ವಿರೇಶ್ ಹೊಗೆಸೊಪ್ಪಿನವರ್. ಕಾರ್ಯಕ್ರಮ ಯಶಸ್ವಿಯಾಗಲು ನಾಡಪ್ರಭು ಕೆಂಪೇಗೌಡ ಫೌಂಡೇಶನ್, ನವದೆಹಲಿಯ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಬೆಂಬಲಿಸಿದರು.

ಚಿದಂಬರ ಕೋಟೆ ವಂದಿಸಿದರು. ಈ ಕಾರ್ಯಕ್ರಮದ ನಿರೂಪಣೆಯ ಹೊಣೆಯನ್ನು ವಹಿಸಿಕೊಂಡಿದ್ದ ಶ್ರೀಮತಿ ಉಷಾ ಭರತಾದ್ರಿಯವರು ಕಾರಣಾಂತರಗಳಿಂದ ಭಾಗವಹಿಸಲು ಸಾಧ್ಯವಾಗದೇ ಇದ್ದರೂ, ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿ ಕಾರ್ಯಕ್ರಮ ಯಶಸ್ವಿಯಾಗಲು ಕಾರಣರಾದರು. ಈ ಕಾರ್ಯಕ್ರಮ ಗಂಧರ್ವ ತಂಡ ಅಂತರ್ಜಾಲದ ಮೂಲಕ ಹಮ್ಮಿಕೊಂಡ ಎರಡನೇ ಪ್ರಯೋಗವಾಗಿತ್ತು. ಆದಷ್ಟು ಬೇಗನೆ ಈ ತಂಡ ಮತ್ತೊಂದು ಕಾರ್ಯಕ್ರಮದೊಂದಿಗೆ ಬರಲಿದೆ, ನಿರೀಕ್ಷಿಸಿ.

***ಪೂಜಾ ರಾವ್***

# 'ನಲಿ ಕಂದಾ'ದಲ್ಲಿ ಮಿಂದೆದ್ದ ಬಾಲಪ್ರತಿಭೆಗಳು



ಕಳೆದ ಹಲವಾರು ವರ್ಷಗಳಿಂದ ದೆಹಲಿಯಲ್ಲಿನ ಅನೇಕ ಕನ್ನಡದ ಪ್ರತಿಭೆಗಳಿಗೆ ವೇದಿಕೆ ಒದಗಿಸಿದ ಹಿರಿಮೆ ದಿನಕರ ಬಳಗದ್ದು. ಈ ಬಾರಿ ವಿನೂತನ ಪ್ರಯೋಗ, ಪ್ರಯತ್ನಕ್ಕೆ ಮುಂದಾಗಿ ದಿಗ್ಬಂಧನಕ್ಕೊಳಗಾದ ಬಾಲಪ್ರತಿಭೆಗಳಲ್ಲಿರುವ ಏಕಾತನತೆಯನ್ನು ದೂರಗೊಳಿಸಿ ಅವರ ಮನಸ್ಸುಗಳನ್ನು ಕಲೆಯ ಮೂಲಕ ಅರಳಿಸಿ ಉತ್ಸಾಹದ ಚಿಲುಮೆಯನ್ನಾಗಿಸುವ ಸದುದ್ದೇಶದಿಂದ ವೈಶಿಷ್ಟ್ಯಪೂರ್ಣವಾದ 'ನಲಿ ಕಂದಾ' ಕಾರ್ಯಕ್ರಮವನ್ನು ದಿನಾಂಕ 26.07.2020ರಂದು ಅಂತರಜಾಲ ಅಂಗಳದಲ್ಲಿ ದಿನಕರ ಫೌಂಡೇಶನ್ (ರಿ.) ನವದೆಹಲಿ ಆಯೋಜಿಸಿತ್ತು.

ದೆಹಲಿಯ ಹಾಗೂ ಕರುನಾಡಿನ ಬಾಲ ಪ್ರತಿಭೆಗಳು, ಭವಿಷ್ಯತ್ತಿನ ಆಶಾಕಿರಣಗಳು ಈ ರಂಗ ವೇದಿಕೆಯಲ್ಲಿ ತಮ್ಮ ಪ್ರದರ್ಶನವನ್ನು ಅನಾವರಣಗೊಳಿಸಿ ಮಿಂಚಿರುವುದಕ್ಕೆ ಕಾರ್ಯಕ್ರಮವನ್ನು ಕಂಡಂತಹ ಕಣ್ಣುಗಳೇ ಸಾಕ್ಷಿಯಾಗಿವೆ.

ಕಾರ್ಯಕ್ರಮದಲ್ಲಿ ಕು. ಋತ್ವಿಕ್ ನೆಲ್ಲಿ ಹಾಗೂ ಕು. ಅವನಿ ನೆಲ್ಲಿ ಭಕ್ತಿಗೀತೆಯನ್ನು, ಕು. ನಂದಿತಾ ಉಭಾಳೆ ಹಾಗೂ ಕು. ಹರ್ಷಿತಾ ಉಭಾಳೆ ನೃತ್ಯವನ್ನು, ಕು. ಅಭಿಷೇಕ ಉಭಾಳೆ ಭಕ್ತಿಗೀತೆಯನ್ನು, ಕು. ಸೌರಭ್ ಕುರ್ಮೋಳ ರಂಗೋಲಿಯನ್ನು, ಕು. ವಿಧಿ ಕೊಠಾರಿ ಹಾಗೂ ಕು. ವಿಧಾನ್ ಕೊಠಾರಿ ನೃತ್ಯವನ್ನು, ಕು. ಸೃಷ್ಟಿ ಪೂಜಾರಿ ಹಾಡನ್ನು, ಕು. ಅವನಿ ನೆಲ್ಲಿ ಕತೆಯನ್ನು, ಕು. ಸುಮಂತ ಆಚಾರ್ಯ ಹಾಗೂ ಕು. ಕಾರ್ತಿಕ ಆಚಾರ್ಯ ಭಕ್ತಿಗೀತೆಯನ್ನು, ಕು. ನಿಶಿತಾ ಪೂಜಾರಿ ಶಿಶುಪ್ರಾಸ ಗೀತೆಯನ್ನು, ಕು. ಅನಘ ಉಪಾಧ್ಯಾಯ ಹಾಗೂ ಕು. ಅಮೋಘ ಉಪಾಧ್ಯಾಯ ಕಿರುನಾಟಕವನ್ನು, ಕು. ನಂದಿತಾ ಉಭಾಳೆ, ಜನಪದ ಗೀತೆ, ಏಕವ್ಯಕ್ತಿ ಪ್ರಯೋಗವನ್ನು, ದಿವ್ಯಶ್ರೀ ಮಿರಜ್‌ಕರ್, ಕಂಪ್ಲಿ ಭಕ್ತಿಗೀತೆ, ಜನಪದ ಗೀತೆಯನ್ನು, ಕು. ಧನ್ವಿನ್ ಎಚ್. ಭಕ್ತಿಗೀತೆಯನ್ನು, ಕು. ಅಮೃತಾ ಎಕ್ಕುಂಡಿ, ಹುಬ್ಬಳ್ಳಿ ಭಕ್ತಿಗೀತೆ, ಜನಪದ ಗೀತೆ ಹಾಗೂ ಏಕವ್ಯಕ್ತಿ ಪ್ರಯೋಗವನ್ನು, ಕು. ಕೀರ್ತನ ಪಿ. ನೀತಿಕತೆಯನ್ನು, ಕು. ವಾತ್ಸಲ್ಯ ಬಿ. ಒಗಟುಗಳನ್ನು ಸುಮಧುರವಾಗಿ ಪ್ರಸ್ತುತಪಡಿಸಿದರು.

ಕು. ಅಭಿಷೇಕ ಉಭಾಳೆ ಕಾರ್ಯಕ್ರಮ ನಿರೂಪಿಸಿದರು. ಸಂತೋಷ್ ಕುಮಾರ್ ಉಪಾಧ್ಯಾಯ ಕಾರ್ಯಕ್ರಮದ ತಾಂತ್ರಿಕ ನಿರ್ವಹಣೆಯನ್ನು ನಿರ್ವಹಿಸಿದರು. ರಂಗಾಸಕ್ತ ಟಿ.ಎಸ್. ರಮೇಶ್ ಕಾರ್ಯಕ್ರಮದ ಹಿನ್ನೆಲೆಯಲ್ಲಿ ನಿಂತು ಸಹಕರಿಸಿದರು. ಈ ಯಶಸ್ವಿ ಕಾರ್ಯಕ್ರಮದ ರೂಪುರೇಷೆ ರಂಗಕರ್ಮಿ, ದಿನಕರ ಫೌಂಡೇಶನ್ (ರಿ.) ನವದೆಹಲಿ ಸಂಚಾಲಕ ಶಿವಾನಂದ ಇಂಗಳೇಶ್ವರ ಅವರದ್ದಾಗಿತ್ತು. ಇಂತಹ ವಿಶಿಷ್ಟ ಕಾರ್ಯಕ್ರಮದ ಆಯೋಜನೆಯ ಮೂಲಕ ಮಕ್ಕಳಲ್ಲಿ ಚೇತೋಹಾರಿ, ಉಲ್ಲಾಸದಾಯಕ ಹಾಗೂ ಉತ್ಸಾಹದಾಯಕ ವಾತಾವರಣವನ್ನು ದಿನಕರ ಫೌಂಡೇಶನ್ ಕಲ್ಪಿಸಿಕೊಟ್ಟಿದ್ದು ಶ್ಲಾಘನೀಯ.

***ಅರವಿಂದ ಬಿಜ್ಜೆ***

## ಶ್ರದ್ಧಾಂಜಲಿ

# ಹಿರಿಯ ಕಲಾವಿದೆ, ನಾಡೋಜ ಡಾ. ಸುಭದ್ರಮ್ಮ ಮನ್ಸೂರ್ ಇನ್ನಿಲ್ಲ



ರಂಗಭೂಮಿಯ ಹಿರಿಯ ಕಲಾವಿದೆ ಡಾ. ಸುಭದ್ರಮ್ಮ ಮನ್ಸೂರ್ ದಿನಾಂಕ 15.07.2020ರಂದು ನಿಧನರಾಗಿದ್ದಾರೆ.

ಸುಭದ್ರಮ್ಮ ಅವರು ಇಬ್ಬರು ಪುತ್ರರು, ಒಬ್ಬ ಪುತ್ರಿ ಹಾಗೂ ಅಪಾರ ಕಲಾಭಿಮಾನಿಗಳನ್ನು ಅಗಲಿದ್ದಾರೆ.

ಸುಭದ್ರಮ್ಮ ಅವರು 50 ವರ್ಷಗಳ ಕಾಲ ರಂಗಭೂಮಿಯಲ್ಲಿ ಮಿಂಚಿದ ಪ್ರತಿಭೆಯಾಗಿದ್ದು, 27ನೇ ವಯಸ್ಸಿಗೆ ರಂಗಭೂಮಿ ಪ್ರವೇಶಿಸಿದ್ದರು. ಕುಂತಿ, ಗಾಂಧಾರಿ, ದ್ರೌಪದಿ, ಉತ್ತರೆ, ಸೀತೆ ಪಾತ್ರಗಳ ಮೂಲಕ ಜನಪ್ರಿಯರಾಗಿದ್ದರು. ಬಳ್ಳಾರಿ ಸುಭದ್ರಮ್ಮ ಎಂದೇ ಖ್ಯಾತಿ ಗಳಿಸಿದ್ದ ಅವರು 2,000ಕ್ಕೂ ಹೆಚ್ಚು ನಾಟಕ ಪ್ರದರ್ಶನಗಳಿಗೆ ಬಣ್ಣ ಹಚ್ಚಿದ್ದಾರೆ. ಇವರ ರಂಗಭೂಮಿ ಸೇವೆಯನ್ನು ಗುರುತಿಸಿ ಕರ್ನಾಟಕ ಸರಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ.

ವಿಜಯನಗರ ಶ್ರೀಕೃಷ್ಣ ದೇವರಾಯ ವಿವಿಯ ಗೌರವ ಡಾಕ್ಟರೇಟ್, ಗುಬ್ಬಿ ವೀರಣ್ಣ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳನ್ನು ಸುಭದ್ರಮ್ಮ ಅವರು ಪಡೆದಿದ್ದಾರೆ.

ಕನ್ನಡ ರಂಗಭೂಮಿಗೆ ಕಲಾವಿದೆಯಾಗಿ ಅಪಾರ ಕೊಡುಗೆ ನೀಡಿದ ಡಾ. ಸುಭದ್ರಮ್ಮ ಮನ್ಸೂರ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

### ಮಹಾ ಪ್ರತಿಭೆಯ ಕಲಾವಿದೆ

ಸುಭದ್ರಮ್ಮ ಮನ್ಸೂರರಂಥ ಮಹಾಪ್ರತಿಭೆಯ ಕಲಾವಿದೆ ನಮ್ಮ ಕಾಲದಲ್ಲಿ ಇದ್ದರೆಂಬ ವಿಚಾರವೇ ಚೇತೋಹಾರಿಯಾದುದು. ಪುರಾಣದ ದ್ರೌಪದಿಯನ್ನೂ, ಇತಿಹಾಸದ ಹೇಮರೆಡ್ಡಿ ಮಲ್ಲಮ್ಮನನ್ನೂ ಸುಭದ್ರಮ್ಮನ ಹಾಗೆ ವರ್ತಮಾನಕ್ಕೆ ತಂದ ಇನ್ನೊಬ್ಬ ಕಲಾವಿದೆ ಇರುವುದು ನನಗೆ ತಿಳಿದಿಲ್ಲ. ಕನ್ನಡ ವಿಶ್ವವಿದ್ಯಾಲಯದಲ್ಲಿದ್ದಾಗ ಎರಡು ಸಲ ಭೇಟಿಯಾಗಿದ್ದೆ. ಅಕ್ಕನ ವಚನ ಹಾಡಿದ್ದರು. ಆ ಹೊತ್ತಿಗೆ ನನಗವರು ಅಕ್ಕನಂತೆಯೇ ಕಂಡಿದ್ದರು.

ಆ ಮಹಾ ಚೈತನ್ಯ ಈಗ ಮರೆಯಾಗಿದೆ (1939–2020). ಅವರಿಗೆ ನಮನಗಳು.

***ಡಾ. ಪುರುಷೋತ್ತಮ ಬಿಳಿಮಲೆ***

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ.
ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-


ರಾಷ್ಟ್ರದ ರಾಜಧಾನಿಯಲ್ಲಿ
ಕನ್ನಡಿಗರೊಬ್ಬರ ಬಹುವರ್ಣದ
ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು
ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ
ಕಾರ್ಯಗಳನ್ನು ಸಮಯಕ್ಕೆ
ಸರಿಯಾಗಿ ಅಚ್ಚುಕಟ್ಟಾಗಿ
ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್,
ಪ್ರಿಂಟಿಂಗ್ ಮತ್ತು ಬೈಂಡಿಂಗ್
ಕೆಲಸಗಳಿಗಾಗಿ ದಯವಿಟ್ಟು
ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING
Office :
C-95, Okhla Industrial Area
Phase-I, New Delhi – 110 020
Ph : 40520770
M : 9811104398, 9811604398

Delhi Karnataka Sangha Abhimata
Aug-2020, Vol. No.30, Issue No. 11, Price Rs.1/-
RNI Regn. No. 53405/91, DL-SW-1/4016/19-21
Date of Publication : Aug 8th / 9th, Posting Date :10th / 11th, Total Pages-20, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

